2018 ಕ.ತೀ.ವ 1460

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೇ ಗೌಡ
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.

ಶ್ರೀ ಶ್ರೀನಿವಾಸ ಪ್ರಭಾಕರ ಹೂಲಿ –ವಿರುದ್ಧ– ಕರ್ನಾಟಕ ರಾಜ್ಯ
(ಸಹಾಯಕ ಪೊಲೀಸ್ ಆಯುಕ್ತರವರಿಂದ ಪ್ರತಿನಿಧಿತ, ಧಾರವಾಡ)*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 374ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅಪೀಲು.

ಧಾರವಾಡದ ತ್ವರಿತ ವಿಚಾರಣಾ ನ್ಯಾಯಾಲಯವು ಎಸ್.ಸಿ.ಸಂ.46/2009ರಲ್ಲಿ ದಿನಾಂಕ 31.12.2013 ರಂದು ಹೊರಡಿಸಿದ ತೀರ್ಪು ಮತ್ತು ನ್ಯಾಯನಿರ್ಣಯದ ಆದೇಶದಿಂದ ಬಾಧಿತರಾದ ಅರ್ಜಿದಾರ/ಆಪಾದಿತನು ಸಲ್ಲಿಸಿದ ಅಪೀಲು ಅರ್ಜಿ ಇದಾಗಿದೆ. ಸದರಿ ತೀರ್ಪು ಮತ್ತು ಆದೇಶದ ಮೂಲಕ ವಿಚಾರಣಾ ನ್ಯಾಯಾಲಯ ಅಪೀಲುದಾರ/ಆಪಾದಿತನನ್ನು ಭಾರತ ದಂಡ ಸಂಹಿತೆಯ 498ಎ, 302 ಮತ್ತು 201 ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮದ 3 ಮತ್ತು 4ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ನೀಡಿದ ನ್ಯಾಯನಿರ್ಣಯದಿಂದ ಅಪೀಲುದಾರ/ಆಪಾದಿತನನ್ನು ನಿರ್ದೋಷಿ ಎಂದು ಖುಲಾಸೆಗೊಳಿಸಲು ಅಪೀಲು ಸಲ್ಲಿಸಿರುವರು.

ಅಪೀಲುದಾರನು ಘಟನೆ ನಡೆದ ಸಮಯದಲ್ಲಿ ತಾನು ಮನೆಯಲ್ಲಿರುವುದಿಲ್ಲವೆಂಬ ಹಾಗೂ ಸಾಕ್ಷಿದಾರರೆಲ್ಲರೂ ಮೃತಳ ಸಂಬಂಧಿಕರೆ ಆಗಿರುತ್ತಾರೆಂಬುದನ್ನು

*ಕ್ರಿಮಿನಲ್ ಅಪೀಲು ಸಂ: 100078/2014, ದಿನಾಂಕ 20ನೇ ಏಪ್ರಿಲ್, 2017.

ರುಜುವಾತುಪಡಿಸಲು ವಿಫಲನಾಗಿರುವುದು ಸ್ಪಷ್ಟವಾಗಿರುವ ಕಾರಣದಿಂದ ಹಾಗೂ ವಿಧಿವಿಜ್ಞಾನ ಪ್ರಯೋಗಾಲಯ ಮತ್ತು ಮರಣೋತ್ತರ ಪರೀಕ್ಷೆ ನಡೆಸಿದ ವೈದ್ಯರ ಸಾಕ್ಷ್ಯವು ಆಕೆಯನ್ನು ಕತ್ತು ಹಿಸುಕಿ ಕೊಲ್ಲಲಾಗಿದೆಯೆಂಬುದನ್ನು ದೃಢಪಡಿಸಿರುವುದರಿಂದ ಅಪೀಲನ್ನು ವಜಾಗೊಳಿಸಿ ಕೆಳ ನ್ಯಾಯಾಲಯದ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿಲ್ಲವೆಂದು ಸ್ಪಷ್ಟಪಡಿಸಿದೆ.

**ಅಪೀಲು ವಜಾಗೊಂಡಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** — ***ಪ್ಯಾರಾಗಳಲ್ಲಿ***

1. *2013 (3) ಕೆಸಿಸಿಆರ್ 2014 (ಡಿಬಿ)*
   *ಹೆಚ್.ಸಿ. ಕರೀಗೌಡ @ ಶ್ರೀನಿವಾಸ ಮತ್ತು ಇತರರು*
   *–ವಿರುದ್ಧ– ಕರ್ನಾಟಕ ರಾಜ್ಯ* — *(ಉಲ್ಲೇ) 10*
2. *ಎಐಆರ್ 1973 ಎಸ್‌ಸಿ 501*
   *ತುಲಿಯ ಕಲಿ –ವಿರುದ್ಧ– ತಮಿಳುನಾಡು ರಾಜ್ಯ* — *(ಉಲ್ಲೇ) 12*
3. *ಎಐಆರ್ 2007 ಎಸ್‌ಸಿ 323*
   *ದಿಲವರ್ ಸಿಂಗ್ –ವಿರುದ್ಧ– ದೆಹಲಿ ರಾಜ್ಯ* — *(ಉಲ್ಲೇ) 14*
4. *(2014) 2 ಎಸ್‌ಸಿಸಿ 1*
   *ಲಲಿತ ಕುಮಾರಿ –ವಿರುದ್ಧ–*
   *ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು* — *(ಉಲ್ಲೇ) 14*
5. *1995 ಎಸ್‌ಸಿಸಿ (ಕ್ರಿಮಿನಲ್) 156*
   *ಪಂಜಾಬ್ ರಾಜ್ಯ –ವಿರುದ್ಧ– ಜಿತ್ ಸಿಂಗ್*
   *ಮತ್ತು ಮತ್ತೊಬ್ಬರು* — *(ಉಲ್ಲೇ) 25*
6. *ಎಐಆರ್ 1993 ಎಸ್‌ಸಿ 2644*
   *ಆಂಧ್ರಪ್ರದೇಶ ರಾಜ್ಯ –ವಿರುದ್ಧ– ಪುಜತಿ ರಾಮುಲು* — *(ಉಲ್ಲೇ) 25*

7. *ಕ್ರಿಮಿನಲ್ ಅಪೀಲು ಸಂ.1341/2005*
*ತ್ರಿಮುಖ್ ಮರೊಟಿ ಕಿರ್ಕನ್ –ವಿರುದ್ಧ–*
*ಮಹಾರಾಷ್ಟ್ರ ರಾಜ್ಯ* *(ಉಲ್ಲೇ) 29*

ಅರ್ಜಿದಾರರ ಪರ: ಶ್ರೀ ಶ್ರೀನಂದ್ ಎ ಪಚ್ಚಾಪುರೆ, ವಕೀಲರು;
ಪ್ರತ್ಯರ್ಜಿದಾರರ ಪರ:ಶ್ರೀ ವಿ.ಎಂ. ಬಣಕಾರ್, ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್.

**ತೀರ್ಪು**

**ನ್ಯಾಯಮೂರ್ತಿ ಬೂದಿಹಾಳ್ ಆರ್.ಬಿ.:**

ಧಾರವಾಡದ ತ್ವರಿತ ವಿಚಾರಣಾ ನ್ಯಾಯಾಲಯವು ಎಸ್.ಸಿ.ಸಂ.46/2009ರಲ್ಲಿ ದಿನಾಂಕ 31.12.2013 ರಂದು ಹೊರಡಿಸಿದ ತೀರ್ಪು ಮತ್ತು ನ್ಯಾಯನಿರ್ಣಯದ ಆದೇಶದಿಂದ ಬಾಧಿತರಾದ ಅರ್ಜಿದಾರ/ಆಪಾದಿತನು ಸಲ್ಲಿಸಿದ ಅಪೀಲು ಅರ್ಜಿ ಇದಾಗಿದೆ. ಸದರಿ ತೀರ್ಪು ಮತ್ತು ಆದೇಶದ ಮೂಲಕ ವಿಚಾರಣಾ ನ್ಯಾಯಾಲಯ ಅಪೀಲುದಾರ/ಆಪಾದಿತನನ್ನು ಭಾರತ ದಂಡ ಸಂಹಿತೆಯ 498ಎ, 302 ಮತ್ತು 201 ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮದ 3 ಮತ್ತು 4ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ನೀಡಿದ ನ್ಯಾಯನಿರ್ಣಯದಿಂದ ಅಪೀಲುದಾರ/ಆಪಾದಿತನನ್ನು ನಿರ್ದೋಷಿ ಎಂದು ಖುಲಾಸೆಗೊಳಿಸಲು ಅಪೀಲು ಸಲ್ಲಿಸಿರುವರು.

2. ದೂರಿನ (ನಿಶಾನೆ ಪಿ–1) ಪ್ರಕಾರದಂತೆ ಮೊಕದ್ದಮೆಯ ವ್ಯವಹರಣೆಗಳ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ. ಅಪೀಲುದಾರ ದಿನಾಂಕ 20.12.2004 ರಂದು ಅಶ್ವಿನಿ (ಮೃತಳು)ಯನ್ನು ಮದುವೆಯಾಗಿರುತ್ತಾನೆ ಮತ್ತು ಮದುವೆಯ ಸಮಯದಲ್ಲಿ ಅಪೀಲುದಾರನಿಗೆ ವರೋಪಚಾರವಾಗಿ 30,000/– ರೂ.ಗಳ ನಗದನ್ನು, 3 ತೊಲ ಚಿನ್ನವನ್ನು ಮತ್ತು ಗೃಹ ಬಳಕೆಯ ಪಾತ್ರೆಗಳನ್ನು ನೀಡಲಾಗಿತ್ತು

ಮತ್ತು ಮೃತಳ ಸೀಮಂತ ಕಾರ್ಯಕ್ರಮದಲ್ಲಿ ಅಪೀಲುದಾರನಿಗೆ 1 ತೊಲ ಚಿನ್ನದ ಆಭರಣವನ್ನು ನೀಡಲಾಗಿತ್ತು. ಹೀಗಿದ್ದರೂ, ಅಪೀಲುದಾರ ಮೃತಳಿಗೆ ಅವಳ ತವರು ಮನೆಯಿಂದ ಹೆಚ್ಚಿನ ವರದಕ್ಷಿಣೆ ತರಬೇಕೆಂದು ಒತ್ತಾಯಿಸಿ ಅವಳಿಗೆ ಸಾಕಷ್ಟು ಹಿಂಸೆ ನೀಡಿರುತ್ತಾನೆಂದು ಮೃತಳು ದೂರುದಾರರಲ್ಲಿ ಹೇಳಿಕೊಂಡಿರುವುದು ಕಂಡು ಬಂದಿರುತ್ತವೆ. ಹಾಗಾಗಿ, ಈ ಸಂಬಂಧದಲ್ಲಿ ದೂರುದಾರರು ಅಪೀಲುದಾರನನ್ನು ಕರೆದು ಮೃತಳಿಗೆ ಅಂಥ ಯಾವುದೇ ಹಿಂಸೆಯನ್ನು ನೀಡಬಾರದೆಂದು ಬುದ್ಧಿವಾದವನ್ನು ಹೇಳಿರುತ್ತಾರೆ. ಆಗಿದ್ದರೂ, ಅಪೀಲುದಾರ ಅಂಥ ಯಾವುದೇ ಬುದ್ಧಿವಾದವನ್ನು ತನ್ನ ಲಕ್ಷ್ಯಕ್ಕೆ ತೆಗೆದುಕೊಂಡಿರುವುದಿಲ್ಲ ಮತ್ತು ಮೃತಳನ್ನು ಅವಳ ತವರು ಮನೆಯಿಂದ ಮತ್ತಷ್ಟು ಹಣ ತರಬೇಕೆಂದು ಒತ್ತಾಯಿಸಿ ಹಿಂಸೆ ನೀಡುವುದನ್ನು ಮುಂದುವರೆಸಿರುತ್ತಾನೆ. ಈ ದಂಪತಿಗಳು ಧಾರವಾಡದ ಗುಲಗಂಜಿ ಕೊಪ್ಪದ ಹನುಮಂತನ ಗುಡಿಯ ಹತ್ತಿರದಲ್ಲಿರುವ ಬಸವರಾಜ್ ಯದವಟ್ಟಿ ಎಂಬುವರ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿರುತ್ತಾರೆ. ಅಪೀಲುದಾರನು ದಿನಾಂಕ 26.12.2008ರ ಬೆಳಗಿನ ಜಾವ 4.30 ಗಂಟೆಯಲ್ಲಿ ತನ್ನ ಮೊಬೈಲ್ ಸಂ.9448973389ರ ಮೂಲಕ ದೂರುದಾರರ ಮೊಬೈಲ್ ಸಂ.9845216245ಕ್ಕೆ ಕರೆಮಾಡಿ ಅಶ್ವಿನಿ (ಮೃತಳು) ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಈ ಕೂಡಲೇ ಬರಬೇಕೆಂದು ಅಪೀಲುದಾರ ದೂರುದಾರನಿಗೆ ತಿಳಿಸಿರುತ್ತಾನೆ. ಸಾವಿನ ಸುದ್ದಿಯಿಂದ ದಿಗ್ಭ್ರಮೆಗೊಂಡ ದೂರುದಾರ ಮತ್ತು ಅವನ ಪತ್ನಿ ಹಾಗೂ ಇತರ ಸಂಬಂಧಿಗಳು ಧಾರವಾಡಕ್ಕೆ ಸುಮಾರು ಬೆಳಿಗ್ಗೆ 10.30 ಗಂಟೆ ಅಷ್ಟರಲ್ಲಿ ಬಂದು, ತಮ್ಮ ಮಗಳಾದ ಅಶ್ವಿನಿಯ ಮನೆಗೆ ಬಂದಾಗ ಸದರಿ ಮನೆಯ ನಡು ಮನೆಯಲ್ಲಿ ಅಶ್ವಿನಿಯ ಶವವನ್ನು ಅಂಗಾತವಾಗಿ ಮಲಗಿಸಲಾಗಿತ್ತು. ಕತ್ತಿನ ಮುಂಭಾಗದಲ್ಲಿ ಗಾಯವಾಗಿದ್ದು ಕತ್ತುಹಿಸುಕಿ ಉಸಿರಾಟ ನಿಲ್ಲಿಸಿರುವಂತೆ ಮತ್ತು ಆ ಜಾಗದ ಚರ್ಮವು ಕಪ್ಪಾಗಿರುವುದು ಕಂಡುಬಂದಿರುತ್ತದೆ. ಆದುದರಿಂದ ಅಪೀಲುದಾರ ತಮ್ಮ ಮಗಳನ್ನು ಕತ್ತು ಹಿಸುಕಿ ಕೊಲೆ ಮಾಡಿರುತ್ತಾನೆ ಎಂದು ಅವನ ವಿರುದ್ಧ ಕಾನೂನಿನ ಕ್ರಮ ತೆಗೆದುಕೊಳ್ಳಬೇಕೆಂದು ಮೃತಳ ತಂದೆ ದೂರನ್ನು ಕೊಟ್ಟಿರುತ್ತಾನೆ. ಸದರಿ ದೂರಿನ ಆಧಾರದ ಮೇಲೆ, ಅಪೀಲುದಾರನ

ವಿರುದ್ಧ ದಂಡನೀಯ ಅಪರಾಧಕ್ಕಾಗಿ ಭಾರತ ದಂಡ ಸಂಹಿತೆಯ 498ಎ ಮತ್ತು 302ನೇ ಪ್ರಕರಣದ ಅಡಿಯಲ್ಲಿ ಅಪರಾಧ ಸಂ.246/2008ನ್ನು ಧಾರವಾಡದ ಸಬ್–ಅರ್ಬನ್ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಲಾಗಿರುತ್ತದೆ. ತನಿಖಾಧಿಕಾರಿಯು ತನಿಖೆಯನ್ನು ನಡೆಸಿದ ನಂತರ ಭಾರತ ದಂಡ ಸಂಹಿತೆಯ 498ಎ, 302 ಮತ್ತು 201ನೇ ಪ್ರಕರಣದ ಅಡಿಯಲ್ಲಿ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮದ 3 ಮತ್ತು 4ನೇ ಪ್ರಕರಣ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಅಪೀಲುದಾರನ ವಿರುದ್ಧ ಆರೋಪ ಪಟ್ಟಿಯನ್ನು ದಾಖಲಿಸಿರುವರು.

3. ಮೊಕದ್ದಮೆಯಲ್ಲಿ ಅದನ್ನು ರುಜುವಾತು ಪಡಿಸುವುದಕ್ಕೆ ಪ್ರಾ.ಸಾ.–1 ರಿಂದ 27 ರಲ್ಲಿರುವ ಎಲ್ಲಾ 27 ಸಾಕ್ಷ್ಯದಾರರನ್ನು ಪ್ರಾಸಿಕ್ಯೂಷನ್‌ನಲ್ಲಿ ವಿಚಾರಣೆ ಮಾಡಲಾಗಿದೆ ಮತ್ತು ನಿಶಾನೆ ಪಿ–1 ರಿಂದ ಪಿ–24 ದಸ್ತಾವೇಜುಗಳನ್ನು ಹಾಜರುಪಡಿಸಲಾಗಿದೆ ಮತ್ತು ಮುದ್ದೆಮಾಲು 1 ರಿಂದ 5ರ ವರೆಗಿನ ಭೌತಿಕ ಪದಾರ್ಥಗಳನ್ನು ಗುರುತು ಮಾಡಲಾಗಿದೆ ಮತ್ತು ಪ್ರತಿವಾದಿ ಕಡೆಯಿಂದ ಸ್ವತಃ ಅಪೀಲುದಾರ/ಆಪಾದಿತನನ್ನು ಪ್ರತಿವಾದಿ ಸಾಕ್ಷ್ಯದಾರನಾಗಿ ವಿಚಾರಣೆಮಾಡಲಾಗಿದೆ ಮತ್ತು ದಸ್ತಾವೇಜನ್ನು ಹಾಜರು ಪಡಿಸಿರುವುದಿಲ್ಲ.

4. ಅಭಿಲೇಖಗಳ ಮೇಲೆ ಮಂಡಿಸಿದ ವಸ್ತು ವಿಷಯಗಳನ್ನು ಪರಿಗಣಿಸಿದ ನಂತರ, ಮಾನ್ಯ ಅಧಿವಿಚಾರಣೆಯ ನ್ಯಾಯಾಧೀಶರು ಆಪಾದಿತನನ್ನು ಭಾರತ ದಂಡ ಸಂಹಿತೆಯ 498ಎ, 302 ಮತ್ತು 201ನೇ ಪ್ರಕರಣ ಅಡಿಯಲ್ಲಿ ಮತ್ತು ವರದಕ್ಷಿಣೆ ನಿಷೇಧ ಅಧಿನಿಯಮದ 3 ಮತ್ತು 4ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧ ಎಸಗಿದ ಆಪಾದಿತನನ್ನು ದೋಷಿ ಎಂದು ನ್ಯಾಯನಿರ್ಣಯಿಸಿರುತ್ತಾರೆ. ಈ ತೀರ್ಪಿನಿಂದ ಮತ್ತು ದೋಷಿ ಎಂಬ ಆದೇಶದಿಂದ ಬಾಧಿತನಾದಂತಹ ಅಪೀಲುದಾರ/ಆಪಾದಿತ ಈ ನ್ಯಾಯಾಲಯದ ಮುಂದೆ ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಮತ್ತು ಆದೇಶದ ಕಾನೂನು ಸಮ್ಮತತೆ ಮತ್ತು ಸರಿತನವನ್ನು ಪ್ರಶ್ನಿಸಿ, ಅಪೀಲು ಪತ್ರದಲ್ಲಿ ನಮೂದಿಸಿದ ಕಾರಣಗಳ ಮೇಲೆ ಅಪೀಲನ್ನು ಸಲ್ಲಿಸಿರುವನು.

5. ನಾವು, ಅಪೀಲುದಾರ/ಆಪಾದಿತರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಗಳನ್ನು ಆಲಿಸಿರುತ್ತೇವೆ ಹಾಗೂ ಪ್ರತ್ಯರ್ಜಿದಾರ–ರಾಜ್ಯದ ಪರವಾಗಿ ಹಾಜರಾದ ಮಾನ್ಯ ಹೆಚ್ಚುವರಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅವರ ವಾದವನ್ನು ಸಹ ಆಲಿಸಿರುತ್ತೇವೆ.

6. ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಅಭಿಲೇಖದ ಮೇಲೆ ಮಂಡಿಸಿದ ವಸ್ತುಗಳಿಗೆ ಪ್ರತಿಕೂಲವಾಗಿ ನಿರ್ಣಯಿಸಿದ ತೀರ್ಪು ಮತ್ತು ಆದೇಶ ಇದಾಗಿದೆ ಎಂದು ಅಪೀಲು ಅರ್ಜಿಯಲ್ಲಿ ನಿವೇದಿಸಿರುವರು. ಅವರು ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಸದರಿ ಅಪರಾಧಕ್ಕಾಗಿ ಅಪೀಲುದಾರ/ಆಪಾದಿತನ ಸಾಕ್ಷ್ಯಾಧಾರವನ್ನು ತಪ್ಪಾಗಿ ಓದಿಕೊಂಡಿರುವರೆಂದು ಮತ್ತು ದೋಷಿ ಎಂದು ಪರಿಗಣಿಸಿ ನೀಡಲಾದ ನ್ಯಾಯನಿರ್ಣಯವು ತಪ್ಪಾಗಿದೆ ಎಂದು ನಿವೇದಿಸಿರುವರು. ಮೊದಲನೆಯದಾಗಿ ಮತ್ತು ಪ್ರಮುಖವಾಗಿ ವಸ್ತು ವಿಷಯಗಳ ಘಟನಾಂಶಗಳಲ್ಲಿ ದೂರುದಾರರು ಸ್ಥಳಕ್ಕೆ ಆಗಮಿಸುವಷ್ಟರಲ್ಲಿಯೇ ಪೊಲೀಸ್ ಅಧಿಕಾರಿಗಳು ಮತ್ತು ಇತರ ವ್ಯಕ್ತಿಗಳು ಆ ಸ್ಥಳದಲ್ಲಿ ಸೇರಿದ್ದರು ದೂರುದಾರರು ಸಂಬಂಧಿಕರೊಂದಿಗೆ ಚರ್ಚಿಸಿ ನಂತರದಲ್ಲಿ ನಿಶಾನೆ ಪಿ–1 ರಲ್ಲಿರುವಂತೆ ದೂರನ್ನು ದಾಖಲಿಸಿರುವರು, ಆದುದರಿಂದ ನೀಡಲಾದ ದೂರು ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 162ನೇ ಪ್ರಕರಣವನ್ನು ಉಲ್ಲಂಘಿಸಿದೆ ಮತ್ತು ದೂರು ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 161ನೇ ಪ್ರಕರಣದ ಅಡಿಯಲ್ಲಿನ ಹೇಳಿಕೆ ಮಾತ್ರವಾಗಿದೆ ಮತ್ತು ಅದನ್ನು ದೂರು ಎಂಬಂತೆ ಪರಿಗಣಿಸಬಾರದು. ನ್ಯಾಯವಾದಿಗಳು ಅಭಿಲೇಖದ ಮೇಲೆ ಮಂಡಿಸಲಾದ ವಸ್ತುವಿಷಯಗಳಲ್ಲಿ ಕಂಡುಬರುವಂತೆ, ದೂರುದಾರರು ಘಟನೆ ನಡೆದ ಸ್ಥಳದಲ್ಲಿಯೇ ದೂರನ್ನು ದಾಖಲಿಸಿರುವುದು ಹಾಗೂ ಘಟನೆಯ ಸ್ಥಳದಲ್ಲಿದ್ದ ಪೊಲೀಸರ ಮುಂದೆ ದೂರನ್ನು ದಾಖಲಿಸಿರುವುದನ್ನು ಮತ್ತು ಮತ್ತೊಮ್ಮೆ ದೂರುದಾರನು ತನ್ನ ಸಂಬಂಧಗಳೊಂದಿಗೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುವುದನ್ನು ಕಂಡುಬರುತ್ತದೆ. ಆದುದರಿಂದ ಪ್ರಾ.ಸಾ.–1 ನೀಡಿದ ದೂರಿನಲ್ಲಿ ಘಟನೆಯ ಸ್ಥಳಕ್ಕೆ ಸಂಬಂಧಿಸಿ ವಿಷಯವು ಒಳಗೊಂಡಿರುವುದಿಲ್ಲ. ನ್ಯಾಯವಾದಿಗಳು,

ತಮ್ಮ ವಾದಾಂಶದಲ್ಲಿ 26.12.2008 ರಂದು ಸುಮಾರು ಬೆಳಗಿನ ಜಾವ 4.30ಕ್ಕೆ ಅಪೀಲುದಾರ/ಆಪಾದಿತ ಪ್ರಾ.ಸಾ.-1 ರಲ್ಲಿನ ದೂರುದಾರರಿಗೆ ದುರದೃಷ್ಟಕರ ಮಾಹಿತಿಯನ್ನು ತಿಳಿಸಿದ್ದ ಹಾಗೂ ದೂರುದಾರರು ತಮ್ಮ ನಿವಾಸದಿಂದ ಘಟನೆಯ ಸ್ಥಳಕ್ಕೆ ಬರಲು ಸುಮಾರು 15 ರಿಂದ 20 ನಿಮಿಷಗಳು ಬೇಕಾಗುತ್ತದೆ. ಹೀಗಿದ್ದರೂ ದೂರುದಾರರು 26.12.2008 ರಂದು ಮಧ್ಯಾಹ್ನ 1.00 ಗಂಟೆಗೆ ದೂರನ್ನು ದಾಖಲಿಸಿರುವರು ಹಾಗಾಗಿ ದೂರನ್ನು ವಿಳಂಬವಾಗಿ ದಾಖಲಿಸುವುದಕ್ಕೆ ಕಾರಣವನ್ನು ಅವರು ವಿವರಿಸಿರುವುದಿಲ್ಲ ಎಂದು ವಾದಾಂಶದಲ್ಲಿ ಎತ್ತಿಹಿಡಿದಿರುವರು. ಆದುದರಿಂದ ಈ ಸಂಬಂಧದಲ್ಲಿ ದೂರುದಾರರು ದೂರನ್ನು ದಾಖಲಿಸುವಲ್ಲಿ ಆಗಿರುವ ಅನಿಶ್ಚಿತ ವಿಳಂಬತೆ ಮತ್ತು ದೂರು ಅಪನಂಬಿಕೆಯಿಂದ ಕೂಡಿರುವುದರಿಂದ ಇಡೀ ಮೊಕದ್ದಮೆಯ ವ್ಯವಹರಣೆಗಳು ಅಪನಂಬಿಕೆಗೆ ಒಳಗಾಗಿದೆ ಎಂದು ವಾದವನ್ನು ಮಂಡಿಸಿರುವರು.

ಮಾನ್ಯ ನ್ಯಾಯವಾದಿಗಳು ವಾದವನ್ನು ಮುಂದುವರಿಸಿ, ಅಪೀಲುದಾರನು 25.12.2008 ರಂದು ಕೊಪ್ಪಳದಲ್ಲಿ ಇದ್ದು, ಅವನು ಮನೆಯಲ್ಲಿ ಇರುವುದಿಲ್ಲ 25/26.12.2008ರ ಮಧ್ಯರಾತ್ರಿ ಮನೆಗೆ ಬಂದಿರುತ್ತಾನೆ. ಆದುದರಿಂದ ಅಪೀಲುದಾರನನ್ನು ಪ್ರಾ.ಸಾ.-1 ರಂತೆ ಸ್ವತಃ ವಿಚಾರಣೆಗೆ ಗುರಿಪಡಿಸಲಾಗಿದೆ. ವಿಚಾರಣೆಯಲ್ಲಿ ಮೌಖಿಕ ಸಾಕ್ಷ್ಯವಾಗಿಯೂ ಮೃತಳು ಸಾವಿಗೀಡಾದ ರಾತ್ರಿಯಲ್ಲಿ ತಾನು ಮನೆಯಲ್ಲಿ ಇರಲಿಲ್ಲವೆಂದು ಮತ್ತು ನಾನು ಕೊಪ್ಪಳದಿಂದ ಮನೆಗೆ ವಾಪಸ್ಸು ಬಂದ ನಂತರ ಮಾತ್ರವೇ ಘಟನೆ ಬಗ್ಗೆ ತಿಳಿಯಿತು. ಅಪೀಲುದಾರನು ತನ್ನ ತಂದೆ-ತಾಯಿಯರೊಂದಿಗೆ ಸ್ಥಳಕ್ಕೆ ಬಂದಿರುತ್ತೇನೆ ಎಂದು ವಿವರಿಸಿರುತ್ತಾನೆ. ಹಾಗಾಗಿ, ನ್ಯಾಯವಾದಿಗಳು ಅಪೀಲುದಾರನು ಬೇರೆಯ ಕಡೆ ಇದ್ದ ಎನ್ನುವ ಪ್ರತಿವಾದಿಯ ಹೇಳಿಕೆಯನ್ನು ಅಧಿವಿಚಾರಣಾ ನ್ಯಾಯಾಲಯವು ಯುಕ್ತವಾಗಿ ಮತ್ತು ಸರಿಯಾಗಿ ಪರಿಗಣನೆಗೆ ತೆಗೆದುಕೊಂಡಿಲ್ಲವೆಂದು ಮತ್ತು ಅದನ್ನು ತಪ್ಪಾಗಿ ನಿರಾಕರಿಸಿದೆ ಎಂದು ವಿವರವಾಗಿ ವಾದವನ್ನು ಮಂಡಿಸಿರುವರು.

ಅವರು ಮತ್ತಷ್ಟು ತಮ್ಮ ವಾದವನ್ನು ಮುಂದುವರೆಸಿ, ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯದಲ್ಲಿ, ಮೃತಳ ಸ್ವಂತ ಸಹೋದರಿಯಾದ ವೇದಶ್ರೀಯೂ ಪ್ರಿಯಕರ ವ್ಯಕ್ತಿಯೊಡನೆ ಓಡಿಹೋದ ವಿಚಾರವನ್ನು ಮೃತ ಅಶ್ವಿನಿಗೆ ತಿಳಿದಾಗ, ಮೊದಲೇ ಅವಳು ತುಂಬಾ ಸೂಕ್ಷ್ಮ ಸ್ವಭಾವದವಳಾಗಿದ್ದು, ಈ ವಿಷಯ ಅವಳನ್ನು ಮತ್ತಷ್ಟು ಘಾಸಿಗೊಳಿಸಿತು. ಈ ಕಾರಣದಿಂದಲೇ ಅವಳು ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂಬ ಅಂಶವನ್ನು ನಿವೇದಿಸಿರುವರು.

ಅಪೀಲುದಾರರ ಪರವಾಗಿ ವಾದ ಮಾಡಿದ ಮಾನ್ಯ ನ್ಯಾಯವಾದಿಗಳು ಅಪೀಲುದಾರ/ಆಪಾದಿತನು ಮೃತಳನ್ನು ಕೊಲೆ ಮಾಡುವಂತಹ ಯಾವುದೇ ಉದ್ದೇಶವನ್ನು ಹೊಂದಿರಲಿಲ್ಲವೆಂದು ಪರ್ಯಾಯವಾಗಿ, ನಿವೇದಿಸಿರುವರು. ಮೃತಳು 25.12.2008 ರಂದು ಅಂದರೆ ಘಟನೆ ನಡೆದ ಹಿಂದಿನ ದಿನದಂದು ಪ್ರಾಸಿಕ್ಯೂಷನ್ ಕಡೆಯಿಂದ ವಿಚಾರಣೆಗೆ ಗುರಿಯಾದ ಎಲ್ಲಾ ಪ್ರಮುಖ ಸಾಕ್ಷಿದಾರರ ಸಾಕ್ಷ್ಯದಲ್ಲಿ ಮೃತಳಿಗೆ ಮತ್ತು ಅಪೀಲುದಾರನಿಗೆ ಸಂಬಂಧಿಕರಾದ ಎಂದರೆ ಅಶೋಕ್ ಅರ್ಕಸಾಲಿ ಮತ್ತು ಕಿಶೋರ್ ಅರ್ಕಸಾಲಿ ಅವರ ಬಳಿ ಮೃತಳು ಅಪೀಲುದಾರನು ತವರುಮನೆಯಿಂದ ಹಣವನ್ನು ತೆಗೆದುಕೊಂಡು ಬಾ ಎಂದು, ಕಿರುಕುಳ ಹಿಂಸೆ ನೀಡುತ್ತಿದ್ದಾನೆಂದು ದೂರನ್ನು ಹೇಳಿದಾಗ ಈ ಸಂಬಂಧದಲ್ಲಿ ಸದರಿ ಅಶೋಕ್ ಮತ್ತು ಕಿಶೋರ್ ಸಂಬಂಧಿಕರು ಅಪೀಲುದಾರ/ಆಪಾದಿತನಿಗೆ ಮೃತಳಿಗೆ ಅಂಥ ಕಿರುಕುಳ ಹಿಂಸೆ ನೀಡಬಾರದೆಂದು ಸಲಹೆಯನ್ನು ನೀಡಿರುತ್ತೇವೆ ಎಂದು ವಿಚಾರಣೆಯ ಸಂದರ್ಭದಲ್ಲಿ ಸಾಕ್ಷ್ಯ ನೀಡಿರುತ್ತಾರೆ. ಇದರಿಂದಲೇ ಆಪಾದಿತನ ಮೇಲೆ ಗಂಭೀರ ಮತ್ತು ಸಂಪೂರ್ಣ ಹೊಣೆಗಾರನಾಗಿರುತ್ತಾನೆಂದು ತಪ್ಪಾಗಿ ಭಾವಿಸಿ ಮೊಕದ್ದಮೆಯನ್ನು ಭಾರತ ದಂಡ ಸಂಹಿತೆಯ 304(2)ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧವೆಂದು ದಾಖಲಿಸಿರುತ್ತಾರೆಂದು ಮತ್ತು ಮೊಕದ್ದಮೆಯನ್ನು ಭಾರತ ದಂಡ ಸಂಹಿತೆಯ 302ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿರುವುದಿಲ್ಲವೆಂದು ವಾದದಲ್ಲಿ ನಿವೇದಿಸಿರುತ್ತಾರೆ.

ಮನೆ ಮಾಲೀಕರ ಸಾಕ್ಷ್ಯ (ಪ್ರಾ.ಸಾ.14)ವನ್ನು ಗಮನಕ್ಕೆ ತಂದುಕೊಂಡಾಗ, ಮನೆ ಮಾಲೀಕಳು ಪ್ರತಿಕೂಲ ಸಾಕ್ಷ್ಯಯಾಗಿರುವುದು ಮತ್ತು ಮೊಕದ್ದಮೆಯ ಪ್ರಾಸಿಕ್ಯೂಷನ್‌ಗೆ ಸಂಪೂರ್ಣವಾಗಿ ಪೂರಕವಾಗಿರುವುದಿಲ್ಲ ಮತ್ತು 25/26.12.2008ರ ರಾತ್ರಿಯ ಅವಧಿಯಲ್ಲಿ ಅಪೀಲುದಾರ ಮನೆಯಲ್ಲಿ ಉಪಸ್ಥಿತಿಯಲ್ಲಿದ್ದು ಎಂಬುದನ್ನು ರುಜುವಾತುಪಡಿಸಲು ಪ್ರಾಸಿಕ್ಯೂಷನ್‌ಗೆ ಸಹಾಯಕವಾಗುವ ರೀತಿಯಲ್ಲೂ ಕಂಡುಬರುವುದಿಲ್ಲ ಎಂಬುದನ್ನು ಸಹ ತಮ್ಮ ವಾದದಲ್ಲಿ ನಿವೇದಿಸಿರುವರು. ಮುಂದುವರೆದು ಮೊಕದ್ದಮೆಯು ಸಾಂದರ್ಭಿಕ ಸಾಕ್ಷ್ಯಗಳನ್ನು ಆಧಾರಿಸಿರುವುದರಿಂದ ಅಪೀಲುದಾರ ಎಸಗಿರುವ ಆಪಾದನೆಯ ಆರೋಪವನ್ನು ರುಜುವಾತು ಪಡಿಸುವುದಕ್ಕೆ ಸಾಂದರ್ಭಿಕ ಸಂಗತಿಗಳ ಸರಣಿಯನ್ನು ಸುಸ್ಥಾಪಿಸುವುದಕ್ಕೆ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ಸಹ ನಿವೇದಿಸಿರುವರು. ಆದುದರಿಂದ, ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಅಪೀಲುದಾರ/ಆಪಾದಿತನನ್ನು ತಪ್ಪಾಗಿ ನ್ಯಾಯನಿರ್ಣಿತಗೊಳಿಸಿರುವರು ಹಾಗಾಗಿ ಸಲ್ಲಿಸಲಾದ ಅಪೀಲನ್ನು ಪುರಸ್ಕರಿಸಬೇಕೆಂದು ಮತ್ತು ಅಧಿವಿಚಾರಣಾ ನ್ಯಾಯಾಧೀಶರು ನೀಡಿದ ತೀರ್ಪು ಮತ್ತು ದೋಷಿ ಎಂದು ನ್ಯಾಯನಿರ್ಣಯದ ಆದೇಶವನ್ನು ವಜಾಗೊಳಿಸಬೇಕೆಂದು ನಿವೇದಿಸಿರುತ್ತಾರೆ.

ಕೊನೆಯದಾಗಿ, ಮೊಕದ್ದಮೆಯ ಸಂಬಂಧದಲ್ಲಿ ಅಪೀಲುದಾರರು ಈಗಾಗಲೇ ಏಳು ವರ್ಷಗಳ ಕಾಲ ದಂಡನೆಯನ್ನು ಅನುಭವಿಸಿರುವನು, ಅಪೀಲುದಾರ/ ಆಪಾದಿತ ಎಸಗಿದ ಅಪರಾಧದ ಹೊಣೆಗಾರಿಕೆಗಾಗಿ ನೀಡುವ ನಿರ್ಣಯದಲ್ಲಿ ಅನುಭವಿಸಿದ ದಂಡನೆಯ ಅವಧಿಯನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ನಿವೇದಿಸಿರುವರು.

ತಮ್ಮ ವಾದಕ್ಕೆ ಪೂರಕವಾಗಿ, ಅಪೀಲುದಾರನ ಪರವಾಗಿ ಮಾನ್ಯ ನ್ಯಾಯವಾದಿಗಳು ಈ ಮುಂದಿನ ನಿರ್ಣಯಗಳನ್ನು ಅವಲಂಬನೆಯಾಗಿ ನೀಡಿರುವರು:

i. 2013 (3) ಕೆಸಿಸಿಆರ್ 2014 (ಡಿಬಿ)ಯಲ್ಲಿನ ಮೊಕದ್ದಮೆ ಹೆಚ್.ಸಿ. *ಕರಿಗೌಡ @ ಶ್ರೀನಿವಾಸ* ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ[1] ಹೊಳೆನರಸೀಪುರ ಪಟ್ಟಣ ಪೊಲೀಸ್, ಹಾಸನ ಜಿಲ್ಲೆ;

ii. ಎಐಆರ್ 1973 ಎಸ್‌ಸಿ 501ಯಲ್ಲಿನ ಮೊಕದ್ದಮೆ ತುಲಿಯಾ ಕಲಿ –ವಿರುದ್ಧ– ತಮಿಳುನಾಡು ರಾಜ್ಯ;

iii. ಎಐಆರ್ (ಎಸ್‌ಸಿ) 2007 3234 ರಲ್ಲಿನ ಮೊಕದ್ದಮೆ ದಿಲವಾರ್ ಸಿಂಗ್ –ವಿರುದ್ಧ– ದೆಹಲಿ ರಾಜ್ಯ;

iv. (2014) 2 ಎಸ್‌ಸಿಸಿ 1 ರಲ್ಲಿನ ಮೊಕದ್ದಮೆ ಲಲಿತ ಕುಮಾರಿ –ವಿರುದ್ಧ– ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು;

v. 1995 ಎಸ್‌ಸಿಸಿ (ಕ್ರಿಮಿನಲ್) 156 ರಲ್ಲಿನ ಮೊಕದ್ದಮೆ ಪಂಜಾಬ್ ರಾಜ್ಯದ ಗುರ್‌ಮೆಜ್ ಸಿಂಗ್ –ವಿರುದ್ಧ– ಜಿತ್ ಸಿಂಗ್ ಮತ್ತು ಮತ್ತೊಬ್ಬರು;

vi. ಎಐಆರ್ 1993 ಎಸ್‌ಸಿ 2644 ರಲ್ಲಿನ ಮೊಕದ್ದಮೆ ಆಂಧ್ರ ಪ್ರದೇಶ ರಾಜ್ಯ –ವಿರುದ್ಧ– ಪುನತಿ ರಾಮುಲು ಮತ್ತು ಇತರರು;

vii. 1995 ಕ್ರಿಮಿನಲ್.ಲಾ.ಜನರಲ್ 457 (ಎಸ್‌ಸಿ)ಯಲ್ಲಿನ ಮೊಕದ್ದಮೆ ಮೆಹರಾಜ್ ಸಿಂಗ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ;

viii. ಐಎಲ್‌ಆರ್ 2017 ಕರ್ನಾಟಕ 105ರಲ್ಲಿನ ಮೊಕದ್ದಮೆ ಹೊನ್ಯ @ ಹೊನ್ನಪ್ಪ @ ಮೋಹನ್ –ವಿರುದ್ಧ– ಕರ್ನಾಟಕ ರಾಜ್ಯ.

7. ವಿರುದ್ಧವಾಗಿ, ರಾಜ್ಯದ ಮಾನ್ಯ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಮಂಡಿಸಿದ ವಾದದಲ್ಲಿ ದೂರುದಾರರು ಘಟನೆ ನಡೆದ ಸ್ಥಳಕ್ಕೆ ಬರುವಷ್ಟರಲ್ಲಿಯೇ ಸದರಿ ಸ್ಥಳಕ್ಕೆ ಪೊಲೀಸರು ಮತ್ತು ಇತರ ವ್ಯಕ್ತಿಗಳು ಬಂದಿರುತ್ತಾರೆ, ಆದರೆ ಅವರ್‍ಯಾರಿಗೂ ಬೀಗ ಹಾಕಿದ ಮನೆಯಲ್ಲಿ ನಡೆದ ಅಪರಾದ ಕೃತ್ಯವು ಯಾರ ಗಮನಕ್ಕೂ ಬಂದಿರುವುದಿಲ್ಲ. ಅಪೀಲುದಾರ/ಆಪಾದಿತ ಸದರಿ ಸ್ಥಳಕ್ಕೆ ಸುಮಾರು ಬೆಳಿಗ್ಗೆ 10.30ಕ್ಕೆ ಬಂದು ತಾನು ಹೊಂದಿದ ಸದರಿ ಮನೆಯ ಬೀಗದ ಕೈಯ ಸಹಾಯದಿಂದ ಮನೆಯ ಬಾಗಿಲನ್ನು ಸ್ವತಃ ಅಪೀಲುದಾರ/ಆಪಾದಿತನೇ ತೆರೆದಿರುತ್ತಾನೆ. ಹಾಗಾಗಿ, ಮಾನ್ಯ ರಾಜ್ಯದ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ಆಪಾದಿತ ಬರುವವರೆಗೂ ಪೊಲೀಸರಿಗಾಗಲೀ, ಇತರ ವ್ಯಕ್ತಿಗಳಿಗಾಗಲೀ ಸ್ಥಳದಲ್ಲಿ ನಡೆದಿರುವ ಅಪರಾಧದ ಬಗ್ಗೆ ಯಾರಿಗೂ ಸ್ಪಷ್ಟವಾಗಿ ತಿಳಿದು ಬಂದಿರುವುದಿಲ್ಲ. ಆದ್ದರಿಂದಲೇ ದೂರುದಾರ–ನಿಶಾನೆ ಪಿ1 ಅವರು ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 162ನೇ ಪ್ರಕರಣ ಉಲ್ಲಂಘಿಸಿರುವ ಪ್ರಶ್ನೆಯೇ ಈ ಮೊಕದ್ದಮೆಯಲ್ಲಿ ಉಂಟಾಗುವುದಿಲ್ಲ ಎಂದು ವಾದವನ್ನು ಮಂಡಿಸಿರುವರು. ಹಾಗೂ ನಿಶಾನೆ ಪಿ1 ಪೊಲೀಸರೊಂದಿಗೆ ಯಾವುದೇ ಪೂರ್ವಾಚಿಂತನೆ ಅಥವಾ ಚರ್ಚೆಯನ್ನು ಮಾಡದೇ ದೂರನ್ನು ದಾಖಲಿಸಿರುವರು ಎಂದು ವಾದದಲ್ಲಿ ನಿವೇದಿಸಿರುವರು. ಪ್ರಾಸಿಕ್ಯೂಷನ್ ಸಾಕ್ಷಿಗಳ ಕಡೆಯಿಂದ ಸಂಬಂಧಪಟ್ಟ ಸಾಕ್ಷ್ಯಗಳ ಅನ್ಯಥಾ ಉಪಸ್ಥಿತಿ ವಾದದಲ್ಲಿ ಸ್ಪಷ್ಟವಾಗಿ ಆಪಾದಿತನು 25/26.12.2008ರ ರಾತ್ರಿ ಮನೆಯಲ್ಲಿಯೇ ಉಪಸ್ಥಿತಿ ಇದ್ದನೆಂದು ಹೇಳುವ ಸಾಕ್ಷ್ಯಗಳು ಕಂಡುಬರುವುದನ್ನು ನಿವೇದಿಸಿರುವರು. ಅವರು ಮುಂದುವರೆದು ಅಪೀಲುದಾರರು ಮನೆಯಲ್ಲಿ ಇಲ್ಲದಿರುವುದಕ್ಕೆ ರುಜುಪಡಿಸಲು ತೃಪ್ತಿಕರವಾದ ಯಾವುದೇ ಒಂದೇ ಒಂದು ವಸ್ತುವಿಷಯವನ್ನು ಮಂಡಿಸಿರುವುದಿಲ್ಲ ಕೇವಲ ಪ್ರತಿವಾದದ ವಾದದಲ್ಲಿ ಮಾತ್ರವೇ ಅಪೀಲುದಾರ/ಆಪಾದಿತ ಘಟನೆ ನಡೆದಾಗ ಮನೆಯಲ್ಲಿ ಉಪಸ್ಥಿತಿ ಇರಲಿಲ್ಲವೆಂದು ವಾದದ ಮೂಲಕ ರುಜುವಾತು ಪಡಿಸಲು ಸಾಧ್ಯವಿಲ್ಲ ಎಂದು ನಿವೇದಿಸಿರುವರು. ಹಾಗಾಗಿ, ಪ್ರತಿವಾದದ ವಾದದಲ್ಲಿ ಹೇಳಿದಂತೆ ಅಪೀಲುದಾರ/ಆಪಾದಿತ ಘಟನೆ ನಡೆದ ರಾತ್ರಿ ಮನೆಯಲ್ಲಿ ಇರಲಿಲ್ಲ ಎಂಬ ಅಂಶವನ್ನು ರುಜುವಾತು ಪಡಿಸಲು ಅವನು ಸಂಪೂರ್ಣ ವಿಫಲನಾಗಿರುವನು

ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಮನೆಯೊಳಗೆ ಅಪೀಲುದಾರ, ಮೃತಳ ಮತ್ತು ಅವರ ಮೂರು ವರ್ಷದ ಮಗು ಇದ್ದಾಗಲೇ ಆ ದುರದುಷ್ಟಕರ ಘಟನೆ ನಡೆದಿದೆ ಎಂದು ತಮ್ಮ ವಾದಾಂಶದಲ್ಲಿ ನಿವೇದಿಸಿರುವರು. ರಾಜ್ಯ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಸದರಿ ಘಟನೆ ಹೇಗೆ ನಡೆಯಿತು ಮತ್ತು ಯಾವ ಸಂದರ್ಭದಲ್ಲಿ ನಡೆಯಿತು ಎಂಬುದನ್ನು ಅಪೀಲುದಾರ/ಆಪಾದಿತನೇ ಸವಿವರವಾಗಿ ವಿವರಿಸಬೇಕೆಂದು ನಿವೇದಿಸುತ್ತಾರೆ. ಮೃತಳ ಮರಣದ ಎಲ್ಲ ಸಂಗತಿಗಳು ಆಪಾದಿತನಿಗೆ ಸಂಪೂರ್ಣವಾಗಿ ತಿಳಿದಿದೆ. ಆದುದರಿಂದ ಸಾಕ್ಷ್ಯ ಅಧಿನಿಯಮ 106ನೇ ಪ್ರಕರಣದಂತೆ ಘಟನೆಯ ಸಂಗತಿಗಳನ್ನು ಮತ್ತು ಮೃತಳ ಮರಣದ ಕಾರಣಗಳನ್ನು ಯುಕ್ತವಾಗಿ ಮತ್ತು ವಿವರವಾಗಿ ವಿವರಿಸುವುದಕ್ಕೆ ಅಪೀಲುದಾರ/ ಆಪಾದಿತ ವ್ಯಕ್ತಿಯೇ ಸಕ್ಷಮ ವ್ಯಕ್ತಿಯಾಗಿರುತ್ತಾನೆ. ಅಪೀಲುದಾರ/ಆಪಾದಿತನ ದಂಡನೆಯಿಂದ ತಪ್ಪಿಸಿಕೊಳ್ಳುವ ಏಕೈಕ ಉದ್ದೇಶದಿಂದಲೇ ತಪ್ಪಾದ ಪ್ರತಿವಾದವನ್ನು ಮಂಡಿಸಲಾಗಿದೆ ಎಂದು ಸಹ ಪಬ್ಲಿಕ್ ಪ್ರಾಸಿಕ್ಯೂಟರ್ ತಮ್ಮ ವಾದದಲ್ಲಿ ನಿವೇದಿಸಿರುವರು. ಅವರು ತಮ್ಮ ವಾದದಲ್ಲಿ ಮಂಡಿಸಲಾದ ಅಭಿಲೇಖದಲ್ಲಿರುವ ಸಾಕ್ಷ್ಯಗಳಲ್ಲಿರುವಂತೆ 26.12.2008 ರಂದು ಬೆಳಗಿನ ಜಾವ 4.30ರ ಸುಮಾರಿಗೆ ದೂರುದಾರರಾದ ಪ್ರಾ.ಸಾ.1 ಅವರಿಗೆ ಅಪೀಲುದಾರ ಅಶ್ವಿನಿ ಆತ್ಮಹತ್ಯೆ ಮಾಡಿಕೊಂಡಿರುವ ವಿಷಯವನ್ನು ತಿಳಿಸಿರುವ ಮತ್ತು ಈ ಕೂಡಲೇ ಬರುವಂತೆ ಹೇಳಿರುವ ವಿಷಯದ ವಾದಾಂಶವನ್ನು ಎತ್ತಿಹಿಡಿದಿದ್ದಾರೆ. ರಾಜ್ಯದ ಮಾನ್ಯ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ಸಾಕ್ಷಿದಾರರ ಸಾಕ್ಷ್ಯದಲ್ಲಿಯೂ ಸಹ ಆಪಾದಿತ ಮೃತಳು ವಿಷವನ್ನು ಸೇವಿಸಿ ಮರಣವನ್ನಪ್ಪಿದಳು ಎಂಬ ವಿಷಯ ತಿಳಿಸಿರುವುದನ್ನು ನಿವೇದಿಸಿರುವರು. ಅದರಂತೆ ಆತ್ಮಹತ್ಯೆ ಮಾಡಿಕೊಂಡ ಸ್ಥಳವನ್ನು ಪರಿಶೀಲಿಸಿದಾಗ ಮೃತಳು ವಿಷವನ್ನು ಸೇವಿಸಿದ ಯಾವುದೇ ವಸ್ತು ಅಥವಾ ಅದಕ್ಕೆ ಪೂರಕವಾದ ವಸ್ತುಗಳು ಕಂಡುಬಂದಿರುವುದಿಲ್ಲ. ಮಾನ್ಯ ರಾಜ್ಯ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ಈ ನ್ಯಾಯಾಲಯದ ಗಮನವನ್ನು ಮೃತಳ ಮರಣೋತ್ತರ ವರದಿಯ ಕಡೆ ಸೆಳೆಯುತ್ತಾ ವೈದ್ಯರು ನಡೆಸಿದ ಮರಣೋತ್ತರ ಪರೀಕ್ಷೆ ಹಾಗೆಯೇ ವೈದ್ಯರು ನೀಡಿದ ಮೌಖಿಕ ಸಾಕ್ಷ್ಯವು ಮೃತಳು ವಿಷಸೇವಿಸಿ

ಆತ್ಮಹತ್ಯೆ ಮಾಡಿಕೊಂಡ ಸಾಧ್ಯತೆಯ ಅಂಶವು ಸಂಪೂರ್ಣವಾಗಿ ವಿರುದ್ಧವಾಗಿ ಮೃತಳನ್ನು ಉಸಿರುಗಟ್ಟಿಸಿ ಸಾಯಿಸಲಾಗಿದೆ ಎಂಬ ಅಂಶವನ್ನು ತಮ್ಮ ವಾದಾಂಶದಲ್ಲಿ ಎತ್ತಿಹಿಡಿದಿರುವರು. ಆದಾಗ್ಯೂ, ಮಾನ್ಯ ರಾಜ್ಯದ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ಅಧಿವಿಚಾರಣಾ ನ್ಯಾಯಾಲಯವು ಅಭಿಲೇಖಿಸಿದ ಮೌಖಿಕ ಮತ್ತು ದಸ್ತಾವೇಜಿಯ ಸಾಕ್ಷ್ಯವನ್ನು ಸರಿಯಾಗಿ ವಿವೇಚಿಸಿ ಅಪೀಲುದಾರ/ಆಪಾದಿತನೇ ದೋಷಿ ಎಂದು ನ್ಯಾಯನಿರ್ಣಯ ಮಾಡಿರುವುದು ಯುಕ್ತವಾಗಿದೆ ಎಂದು ನಿವೇದಿಸಿರುವರು. ಈ ಸಂಬಂಧದಲ್ಲಿ ಅಧಿವಿಚಾರಣಾ ನ್ಯಾಯಾಲಯ ನೀಡಿದ ತೀರ್ಪಿನಲ್ಲಿ ಯಾವುವೇ ಅಕ್ರಮತೆ ಇರುವುದಿಲ್ಲ. ತೀರ್ಪಿನಲ್ಲಿ ಯಾವುದೇ ವಕ್ರತೆಯಾಗಲೀ ಅಥವಾ ಅಂಥ ತೀರ್ಮಾನ ನೀಡುವಾಗ ವಿಚಾರಣಾಧೀನ ನ್ಯಾಯಾಲಯವು ಮನಬಂದಂತೆ ನಡೆದುಕೊಂಡಿರುವುದಾಗಲೀ ಇಲ್ಲಿ ಕಂಡುಬರುವುದಿಲ್ಲ ಎಂದು ನಿವೇದಿಸಿರುವರು. ಹಾಗೇಯೇ ಅವರು ಕೊನೆಯದಾಗಿ, ಸಲ್ಲಿಸಿದ ಅಪೀಲಿನಲ್ಲಿ ಗುರ್ಣಾಹತೆಯೇ ಇರುವುದಿಲ್ಲ ಎಂದು ನಿವೇದಿಸಿ ಅಪೀಲನ್ನು ವಜಾಮಾಡಿ ವಿಚಾರಣಾಧೀನ ನ್ಯಾಯಾಲಯವು ನೀಡಿದ ತೀರ್ಪನ್ನು ಮತ್ತು ನ್ಯಾಯನಿರ್ಣಯದ ಆದೇಶವನ್ನು ಸ್ಥಿರಿಕರಿಸಬೇಕೆಂದು ಹೇಳಿ, ವಿಚಾರಣಾಧೀನ ನ್ಯಾಯಾಲಯವು ವಿಧಿಸಿದ ಶಿಕ್ಷೆಯೂ ಸುಸಂಗತವಾಗಿದೆ ಮತ್ತು ಯುಕ್ತವಾಗಿದೆ ಎಂದು ಸಹ ನಿವೇದಿಸಿರುವರು. ಈ ಸಂಬಂಧದಲ್ಲಿ ಮಾನ್ಯ ರಾಜ್ಯದ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ಸರ್ವೋಚ್ಚ ನ್ಯಾಯಾಲಯ ಕೆಲವು ನಿರ್ಣಯಗಳನ್ನು ಅವಲಂಬನೆಯಾಗಿ ನೀಡಿದೆ ಈ ಕೆಳಗಿನಂತಿದೆ:

i. ಕ್ರಿಮಿನಲ್ ಅಪೀಲು ಸಂ.1341 2005ರ ದಿನಾಂಕ 11.11.2006ರಲ್ಲಿ ತ್ರಿಮುಖ್ ಮಾರೊಟಿ ಕಿರ್‌ಕನ್ –ವಿರುದ್ಧ– ಮಹಾರಾಷ್ಟ್ರ ರಾಜ್ಯ.

8. ನಾವು, ಅಪೀಲಿನ ಕೋರಿಕೆಯಲ್ಲಿ ಒತ್ತಾಯಿಸಿದ ಕಾರಣಗಳನ್ನು ಅಧಿವಿಚಾರಣಾ ನ್ಯಾಯಾಲಯದ ಮುಂದೆ ಹಾಜರು ಪಡಿಸಲಾದ ಸಾಕ್ಷ್ಯದಾರರ

ಮೌಖಿಕ ಸಾಕ್ಷ್ಯ ಮತ್ತು ದಸ್ತಾವೇಜುಗಳ ಅನುಸಾರವಾಗಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ನ್ಯಾಯನಿರ್ಣಯದ ಆದೇಶವನ್ನು ಅವಲೋಕಿಸಿದ್ದೇವೆ. ನಾವು ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ತಮ್ಮ ವಾದಗಳಿಗೆ ಅವಲಂಬನೆಯಾಗಿ ಮೇಲೆ ಉಲ್ಲೇಖಿಸಿದ ತೀರ್ಪುಗಳನ್ನು ಸಹ ಅವಲೋಕಿಸಿದ್ದೇವೆ. ಹಾಗೇಯೇ, ನಾವು ಎರಡು ಬದಿಯ ನ್ಯಾಯವಾದಿಗಳು ಮೌಖಿಕವಾಗಿ ನಿವೇದಿಸಿದ ವಾದಗಳನ್ನು ಸಹ ಪರಿಗಣನೆಗೆ ತೆಗೆದು ಕೊಂಡಿದ್ದೇವೆ.

9. ಮೊದಲನೆಯದಾಗಿ ಮತ್ತು ಪ್ರಮುಖವಾಗಿ ಅಪೀಲುದಾರರು/ಆಪಾದಿತನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ದೂರನ್ನು ದಾಖಲಿಸಲು ಆದ ವಿಳಂಬದ ಕಾರಣವನ್ನು ವಿವರಿಸಿರುವುದಿಲ್ಲ ಎಂಬ ತಮ್ಮ ವಾದಾಂಶದಲ್ಲಿ ಪ್ರಶ್ನಿಸಿರುವರು. ಹಾಗೆಯೇ ಪ್ರಾಸಿಕ್ಯೂಷನ್ ಮೊಕದ್ದಮೆಯಲ್ಲಿ ಪೊಲೀಸ್ ಅಧಿಕಾರಿ, ಇತರ ಪ್ರಾಸಿಕ್ಯೂಷನ್ ಸಾಕ್ಷಿದಾರರು ಮತ್ತು ಸಾರ್ವಜನಿಕರು ದೂರನ್ನು ದೂರುದಾರರಾದ ಪ್ರಾ.ಸಾ.1 ಮೋಹನ್ ಅಣ್ಣಪ್ಪ ಅಸಂಗಿಯವರು ದಾಖಲಿಸುವುದಕ್ಕೆ ಮುಂಚಿತವಾಗಿಯೇ ಘಟನೆ ನಡೆದ ಸ್ಥಳದಲ್ಲಿ ಉಪಸ್ಥಿತಿ ಇದ್ದರೆಂದು ತಿಳಿಸಿರುವರು, ಪೊಲೀಸರು ಘಟನೆ ನಡೆದ ಸ್ಥಳದಲ್ಲಿ ಉಪಸ್ಥಿತಿ ಇದ್ದರೂ ಘಟನೆ ಸಂಬಂಧದಲ್ಲಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿರುವುದಿಲ್ಲ ಕಾರಣವೇನೆಂದರೆ ಎಸಗಲಾದ ಸಂಜ್ಞೇಯ ಅಪರಾಧ ಕುರಿತು ಅವರ ಅರಿವಿಗೆ ಬಂದಿರುವುದಿಲ್ಲ. 26.12.2008 ರಂದು ಮಧ್ಯಾಹ್ನ 1 ಗಂಟೆಯಲ್ಲಿ ದೂರುದಾರರಾದ ನಿಶಾನೆ ಪಿ.1 ಇವರು ದೂರನ್ನು ದಾಖಲಿಸುವ ಮುಂಚೆಯೇ ಸ್ಥಳದಲ್ಲಿ ಉಪಸ್ಥಿತರಿದ್ದ ಪೊಲೀಸ್ ಅಧಿಕಾರಿಗಳು ತಮ್ಮ ತನಿಖೆಯನ್ನು ಪ್ರಾರಂಭಿಸಿರುತ್ತಾರೆ ಮತ್ತು ಎಸಗಿದ ಅಪರಾಧವು ಸಂಜ್ಞೇಯವಾದುದು ಎಂದು ಅವರ ಅರಿವಿಗೆ ಬಂದಿರುತ್ತವೆ. ಆದುದರಿಂದ ಪ್ರತಿವಾದಿಗಳು ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 162ನೇ ಪ್ರಕರಣವನ್ನು ದೂರುದಾರ ನಿಶಾನೆ ಪಿ1 ಅವರು ಉಲ್ಲಂಘಿಸಿರುತ್ತಾರೆ. ವಾದಾಂಶದಲ್ಲಿ ಮತ್ತು ತನಿಖೆಯ ಅವಧಿಯಲ್ಲಿ ದಾಖಲಿಸಲಾದ ಹೇಳಿಕೆಗಳನ್ನು 161ನೇ ಪ್ರಕರಣ ಅಡಿಯಲ್ಲಿ

ಮಾತ್ರವೇ ಪರಿಗಣಿಸಬೇಕಾಗುತ್ತವೆ ಎಂಬ ವಾದಾಂಶವನ್ನು ಈ ಸಂಬಂಧದಲ್ಲಿ ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಅವಲಂಬನೆಯಾಗಿ ನೀಡಿದ ನಿರ್ಣಯಗಳನ್ನು ತುಂಬಾ ಜಾಗರೂಕತೆಯಿಂದ ನಾವು ಅವಲೋಕಿಸಿದ್ದೇವೆ.

10. ***ಹೆಚ್.ಸಿ.ಕರೀಗೌಡ @ ಶ್ರೀನಿವಾಸ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ***[1] ವರದಿಯಾಗಿರುವ ಮೊಕದ್ದಮೆಯಲ್ಲಿನ ನಿರ್ಣಯದಲ್ಲಿ 22.05.2005 ರಂದು ಸಂಜೆ ಸುಮಾರು 6.30 ಗಂಟೆಯಲ್ಲಿ ನಡೆದ ದುರದೃಷ್ಟಕರ ಘಟನೆಯಲ್ಲಿ ಕೃಷ್ಣೇಗೌಡ ಮತ್ತು ಶ್ರೀನಿವಾಸ ಎಂಬ ಇಬ್ಬರು ವ್ಯಕ್ತಿಗಳು ಸಾವನ್ನಪ್ಪಿದರು. ವಾಸ್ತವಾಗಿ ಪ್ರಾಸಿಕ್ಯೂಷನ್ ಮೊಕದ್ದಮೆಯ ಪ್ರಕಾರದಂತೆ ಸದರಿ ಮೊಕದ್ದಮೆಯಲ್ಲಿ ಪ್ರಾ.ಸಾ. 4 ಮತ್ತು 18 ರವರು ಇಬ್ಬರು ಮೃತ ವ್ಯಕ್ತಿಗಳ ಮೇಲೆ ನಡೆಯುತ್ತಿದ್ದ ಹಲ್ಲೆಯನ್ನು ತಡೆದು ಮೃತರನ್ನ ರಕ್ಷಿಸುವುದಕ್ಕೆ ಬಂದಾಗ ನಡೆದ ಘಟನೆಯಾಗಿದೆ. ಮೃತರ ಮೇಲೆ ಹಲ್ಲೆ ಮಾಡಿದ ತರುವಾಯ ಆಪಾದಿತರು ಆ ಸ್ಥಳದಿಂದ ಆಯುಧಗಳೊಂದಿಗೆ ಓಡಿಹೋದಾಗ ಇಬ್ಬರು ಮೃತ ವ್ಯಕ್ತಿಗಳು ಮತ್ತು ಪ್ರಾ.ಸಾ.4 ನನ್ನು ಟೆಂಪೊದ ಮೂಲಕ ಆಸ್ಪತ್ರೆಗೆ ತಂದಾಗ ಮೃತ ವ್ಯಕ್ತಿಗಳಿಬ್ಬರು ಮಾರ್ಗ ಮಧ್ಯದಲ್ಲಿಯೇ ಸಾವನ್ನಪ್ಪಿದ್ದಾರೆಂದು ವೈದ್ಯರು ತಿಳಿಸಿರುತ್ತಾರೆ. ಈ ಘಟನೆಯ ಪ್ರತ್ಯಕ್ಷ ಸಾಕ್ಷಿದಾರನಾಗಿರುವ ಪ್ರಾ.ಸಾ.18 ಹಲ್ಲೆಯಿಂದ ತಪ್ಪಿಸಿಕೊಂಡಿರುವನು ಮತ್ತು ಪ್ರಾ.ಸಾ.4 ಹಲ್ಲೆಗೆ ಒಳಗಾಗಿರುವ ಮತ್ತೊಬ್ಬ ಪ್ರತ್ಯಕ್ಷ ಸಾಕ್ಷಿದಾರನಾಗಿರುತ್ತಾನೆ. ಹಲ್ಲೆಯಿಂದ ದಾಖಲಾದ ಪ್ರಾ.ಸಾ.4ನ್ನು ಪ್ರಾ.ಸಾ.27 ವೈದ್ಯಾಧೀಕಾರಿಯೂ ಪರೀಕ್ಷಿಸಿರುತ್ತಾರೆ. ಪ್ರಾ.ಸಾ.4 ಪರೀಕ್ಷಿಸಿದ ನಂತರ ಪ್ರಾ.ಸಾ.27 ವೈದ್ಯಾಧೀಕಾರಿ ನಿಶಾನೆ ಪಿ.25 ಮತ್ತು 26ರ ಪ್ರಕಾರದಂತೆ ನ್ಯಾಯಿಕ ಪೊಲೀಸರಿಗೆ ಆಸ್ಪತ್ರೆಗೆ ತರುವಾಗಲೇ ಇಬ್ಬರು ವ್ಯಕ್ತಿಗಳು ಸಾವನ್ನಪ್ಪಿರುವರೆಂದು ಹಲ್ಲೆಯಿಂದ ಕ್ಷತಿಗೊಂಡ ಪ್ರಾ.ಸಾ.4ನ್ನು ಆಸ್ಪತ್ರೆಗೆ ದಾಖಲಿಸಿಕೊಳ್ಳಲಾಗಿದೆ ಹಾಗೂ ಆಪಾದಿತ ಸಂ.4–ರಾಜೇಗೌಡನು ಮಾಡಿದ ಹಲ್ಲೆಯಿಂದಲೇ ಪ್ರಾ.ಸಾ.4ನ್ನು ಆಸ್ಪತ್ರೆಗೆ

1. 2013 (3) ಕೆಸಿಸಿಆರ್ 2014 (ಡಿಬಿ)

ದಾಖಲಿಸಿಕೊಂಡು, ಚಿಕಿತ್ಸೆ ನೀಡಲಾಗಿದೆ ಎಂದು ವರದಿ ಮಾಡಿರುತ್ತಾರೆ. ಸದರಿ ಮಾಹಿತಿಯನ್ನು ಪ್ರಾರಂಭಿಕವಾಗಿ ಪಡೆದ ಹೆಡ್ ಕಾನ್ಸಸ್ಟೇಬಲ್–134 ಅವರು ಮಾಹಿತಿಯನ್ನು ಪ್ರಾ.ಸಾ.28–ಪಿಎಸ್ಐ ಅವರಿಗೆ ಹಸ್ತಾಂತರಿಸಿರುತ್ತಾರೆ. ಮಾಹಿತಿಯನ್ನು ಸ್ವೀಕರಿಸಿದ ಮೇಲೆ ಹೊಳೆನರಸೀಪುರದಲ್ಲಿ ನಿಶಾನೆ ಪಿ.25 ಮತ್ತು 26 ವ್ಯವಹರಣೆಯಂತೆ ಪ್ರಾ.ಸಾ.4 ಘಟನೆಯ ಬಗ್ಗೆ ಹೇಳಿಕೆ ಕೊಡಲು ಯೋಗ್ಯಸ್ಥಿತಿಯಲ್ಲಿದ್ದಾನೆಯೇ ಎಂಬುದನ್ನು ವೈದ್ಯಾಧಿಕಾರಿಯಿಂದ ಖಚಿತಪಡಿಸಿಕೊಂಡು, ವೈದ್ಯಾಧಿಕಾರಿಯ ಉಪಸ್ಥಿತಿಯಲ್ಲಿಯೇ ನಿಶಾನೆ ಪಿ.2ರ ಪ್ರಕಾರದಂತೆ ಪ್ರಥಮ ಮಾಹಿತಿಯನ್ನು ದಾಖಲಿಸಿಕೊಳ್ಳಲಾಗಿದೆ ಮತ್ತು ಪೊಲೀಸ್ ಠಾಣೆಗೆ ಹಿಂದಿರುಗಿದ ನಂತರದಲ್ಲಿ ನಿಶಾನೆ ಪಿ.2 ದೂರಿನ ಆಧಾರದ ಮೇಲೆ ಸದರಿ ಅಪರಾಧಕ್ಕಾಗಿ ಅಪರಾಧ ಸಂ.98/2005ರಲ್ಲಿ ಮೊಕದ್ದಮೆಯನ್ನು ನೋಂದಾಯಿಸಿ ಕೊಳ್ಳಲಾಗಿದೆ.

11. ವಿಭಾಗೀಯ ಪೀಠವು (ಮೇಲಿನ ಹೆಚ್.ಸಿ. ಕರೀಗೌಡ @ ಶ್ರೀನಿವಾಸ) ಸದರಿ ತೀರ್ಪಿನ ಪ್ಯಾರಾ ಸಂ.15ನ್ನು ಗಮನಕ್ಕೆ ತಂದುಕೊಂಡ ಅದರ ಅಭಿವ್ಯಕ್ತಿಗಳು ಈ ಕೆಳಗಿನಂತಿದೆ.

> "ಪ್ರಾ.ಸಾ.3, 4, 10 ಮತ್ತು 11 ಇವರುಗಳು ಸಾಕ್ಷ್ಯಗಳನ್ನು ನಮ್ಮ ಗಮನಕ್ಕೆ ತಂದು ಕೊಂಡಾಗ, ಸಾಕ್ಷ್ಯಗಳು, ಘಟನೆ ಸಂಭವಿಸಿದ ಆ ಕೂಡಲೇ ಸ್ಥಳಕ್ಕೆ ಬಂದ ಪೊಲೀಸರು ಸ್ಥಳದಿಂದ ಪ್ರಾ.ಸಾ.4 ಒಳಗೊಂಡಂತೆ ಇತರ ಸಾಕ್ಷಿದಾರರ ನೆರವಿನೊಂದಿಗೆ ಟೆಂಪೊ ಮೂಲಕ ಮೃತದೇಹಗಳೆರಡನ್ನು ತೆಗೆದುಕೊಂಡು ಆಸ್ಪತ್ರೆಗೆ ಹೋದದನ್ನು ಬಹಿರಂಗ ಪಡಿಸುತ್ತವೆ ಎಂದು ನಿವೇದಿಸಿರುವರು. ಅವರು ತಮ್ಮ ವಾದವನ್ನು ಮುಂದುವರೆಸಿ, ಪೊಲೀಸರು ಎರಡು ಮೃತದೇಹಗಳನ್ನು ಆಸ್ಪತ್ರೆಗೆ ಸಾಗಿಸುವ ಮುಂಚೆಯೇ ಪ್ರಾ.ಸಾ.4 ಹಳೆಕೋಟೆ ಔಟ್‌ಪೋಸ್ಟ್‌ಗೆ ಹೋಗಿ ಸಂಭವನೀಯ ಘಟನೆಯ

ಬಗ್ಗೆ ಮಾಹಿತಿಯನ್ನು ನೀಡಿರುತ್ತಾನೆ ಮತ್ತು ತದನಂತರದಲ್ಲಿ ಸಂಭವನೀಯ ಘಟನೆಯ ಸ್ಥಳಕ್ಕೆ ವಾಪಸ್ಸಾಗಿರುವ ವಿಷಯವನ್ನು ಬಹಿರಂಗ ಪಡಿಸಿರುತ್ತಾರೆ. ಸದರಿ ಔಟ್‌ಪೋಸ್ಟ್ ಪೊಲೀಸರು ಸಹ ಹೊಳೆನರಸಿಪುರದ ಪೊಲೀಸ್ ಠಾಣೆಗೆ ಸದರಿ ಮಾಹಿತಿಯನ್ನು ವೈರಲೆಸ್ ಮೂಲಕ ನೀಡಿರುತ್ತಾರೆ. ಔಟ್‌ಪೋಸ್ಟ್ ಪೊಲೀಸರು ದಾಖಲಿಸಿಕೊಂಡ ಮಾಹಿತಿಯನ್ನು ಹೊಳೆನರಸೀಪುರದ ಪೊಲೀಸ್ ಠಾಣೆಗೆ ಕಳುಹಿಸಿರುತ್ತಾರೆ ಎಂದು ನಿವೇದಿಸಿರುತ್ತಾರೆ. ಅವರು ಮುಂದುವರೆದು ಪ್ರಾ.ಸಾ.29–ಸಿಪಿಐ ಸಾಕ್ಷ್ಯದಲ್ಲಿ ಈ ಬಗ್ಗೆ ರಾತ್ರಿ 10.30 ಅಥವಾ 11.00 ಗಂಟೆಯ ಸುಮಾರಿಗೆ ಪ್ರಾ.ಸಾ.28–ಪಿಎಸ್ಐ ಅವರಿಗೆ ವೈರ್‌ಲೆಸ್‌ನಿಂದ ಬಂದ ಮಾಹಿತಿ ನೀಡಿರುವುದನ್ನು ಮತ್ತು ಸಂಭವನೀಯ ಸ್ಥಳಕ್ಕೆ ಇಬ್ಬರು ಬಂದಿರುವ ವಿಷಯವನ್ನು ಬಹಿರಂಗಪಡಿಸಿದೆ. ಮಾಹಿತಿಯನ್ನು ಗಂಭೀರವಾಗಿ ಪರಿಗಣಿಸಿದ ಪ್ರಾ.ಸಾ.28 ಮತ್ತು 29 ಇವರು ಸಂಭವನೀಯ ಘಟನೆಯ ಸ್ಥಳಕ್ಕೆ ಬರುವ ಮುಂಚೆಯೇ ಘಟನೆ ನಡೆದು ಹೋಗಿರುವ ಬಗ್ಗೆ ನಿಶಾನೆ ಪಿ.2ರಲ್ಲಿ ಪ್ರಥಮ ಮಾಹಿತಿಯಲ್ಲಿ ದಾಖಲಾಗಿರುತ್ತದೆ ಮತ್ತು ಪ್ರಾ.ಸಾ.28 ಆಸ್ಪತ್ರೆಯಲ್ಲಿ ದಾಖಲಿಸಿದ ಪ್ರಥಮ ಮಾಹಿತಿಯಿಂದ ಕಂಡುಬರುತ್ತದೆ. ಆದುದರಿಂದ ಈ ಮೊಕದ್ದಮೆಯಲ್ಲಿ ಪೊಲೀಸರಿಗೆ ಸಂಭನೀಯ ಅಪರಾಧ ಸಂಭವಿಸುವ ಬಗ್ಗೆ ನಿಶ್ಚಿತವಾಗಿ ತಿಳಿದಿದ್ದರೂ ಸಹ ಈ ಸದರಿ ಮೊಕದ್ದಮೆಯಲ್ಲಿ ತನಿಖೆ ಪ್ರಾರಂಭವಾದಾಗ ನಿಶಾನೆ ಪಿ.2ನ್ನು ಪ್ರಥಮ ಮಾಹಿತಿ ಎಂದು ಪರಿಗಣಿಸಿರುವುದಿಲ್ಲ ಮತ್ತು ಇದು ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತಿಯ 162ನೇ ಪ್ರಕರಣದ ಉಲ್ಲಂಘನೆಯಾಗಿರುತ್ತವೆ" ಎಂದು ನಿವೇದಿಸಿರುವರು.

ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ಒಳಗೊಂಡಿರುವ ವಾಸ್ತವಿಕ ಅಂಶಗಳನ್ನು ವಿಶ್ಲೇಷಿಸಿದ ನಂತರ ವಿಭಾಗೀಯ ಪೀಠವು ನಿಶಾನೆ ಪಿ.2–ಪ್ರಥಮ ಮಾಹಿತಿಯೂ

ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 162ನೇ ಪ್ರಕರಣವನ್ನು ಉಲ್ಲಂಘಿಸಿದೆ ಎಂದು ನಿರ್ಣಯಿಸಿದೆ.

12. ***ತುಲಿಯ ಕಲಿ –ವಿರುದ್ಧ– ತಮಿಳುನಾಡು ರಾಜ್ಯ***[2] ಮೊಕದ್ದಮೆಯಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ಯಾರಾ 12ರಲ್ಲಿ ನೀಡಿದ ಮತ್ತೊಂದು ನಿರ್ಣಯವು ಈ ಕೆಳಗಿನಂತಿದೆ:

> "ವಲಂಜಿಯರಾಜು ಹಳ್ಳಿಯಿಂದ ಮೂರು ಫರ್ಲಾಂಗು ದೂರದಲ್ಲಿ ಮುತ್ತುಸ್ವಾಮಿಯವರ ಮನೆಯಿದೆ ಎಂದು ವಲಂಜಿಯರಾಜು ಸಾಕ್ಷ್ಯದಲ್ಲಿ ತಿಳಿದುಬಂದಿದೆ. ಮುತ್ತುಸ್ವಾಮಿಯವರ ಮನೆಯಿಂದ ಮೂರು ಫರ್ಲಾಂಗು ದೂರದಲ್ಲಿ ವಲವಂತಿ ಪೊಲೀಸು ಸ್ಟೇಷನ್ ಸಹ ಇದೆ. 1970ರ ಮಾರ್ಚ್ 12 ರಂದು ವಲಂಜಿಯರಾಜು ಹಳ್ಳಿಯಲ್ಲಿ ಪ್ರಾ.ಸಾ.8 ಮುತ್ತುಸ್ವಾಮಿ ಅವನ ಮನೆಯಲ್ಲಿ ರಾತ್ರಿ 10.30 ಗಂಟೆಯಾದರೂ ಕಂಡುಬಂದಿರುವುದಿಲ್ಲ ಎಂದು ಊಹಿಸಿದರೂ, ವಲಂಜಿಯರಾಜು ಪೊಲೀಸು ಸ್ಟೇಷನಲ್ಲಿ ಆ ಬಗ್ಗೆ ಯಾವುದೇ ದೂರನ್ನು ದಾಖಲಿಸಿರುವುದಿಲ್ಲ ಇದು ಅಸ್ಪಷ್ಟತೆಯಿಂದ ಕೂಡಿದೆ. ನಮ್ಮ ಅಭಿಪ್ರಾಯದಲ್ಲಿ, ಇದು ನಂಬಲು ತುಂಬಾ ಕಷ್ಟಕರವಾದುದಾಗಿದೆ ಆಪಾದಿತನನ್ನು ಮಧ್ಯಾಹ್ನ 2 ಗಂಟೆಯಲ್ಲಿ ಮೃತ ಮಧಾಂತಿಯನ್ನು ಕೊಲೆ ಮಾಡಿದ ಸಂದರ್ಭದಲ್ಲಿ ಎಲ್ಲರು ನೋಡಿರುತ್ತಾರೆ ಮತ್ತು ಸಾಕಷ್ಟು ಸಂಖ್ಯೆಯ ಹಳ್ಳಿಗರು ಘಟನೆಯನ್ನು ನೋಡಿರುತ್ತಾರೆ, ಘಟನೆಯ ಬಗ್ಗೆ ಮಾತನಾಡಿರುತ್ತಾರೆ ತದನಂತರದಲ್ಲಿ ಇಡೀ ದಿನ ಕಳೆಯುವವರೆಗೂ ಘಟನೆ ಕುರಿತು ಯಾವುದೇ ದೂರು ದಾಖಲಾಗಿರುವುದಿಲ್ಲ. ಪೊಲೀಸು ಠಾಣೆಯು ವಲಂಜಿಯರಾಜು ಮತ್ತು ಕೊಪಿಯ ಹಳ್ಳಿಯಿಂದ ಎರಡು ಮೈಲಿಗಿಂತ ಕಡಿಮೆ ದೂರದಲ್ಲಿದ್ದರೂ

2. ಎಐಆರ್ 1973 ಎಸ್‌ಸಿ 501

ದೂರು ದಾಖಲು ಗೊಂಡಿರುವುದಿಲ್ಲ ಮತ್ತು ಇಡೀ ದಿನ ಘಟನೆಯ ಬಗ್ಗೆ ದೂರು ದಾಖಲಿಸಲು ಹಳ್ಳಿಗರು ವಿಫಲರಾಗಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣವೇನೆಂದರೆ ಘಟನೆಯ ಸಾಕ್ಷಿದಾರರಾಗಲು ಯಾರೊಬ್ಬರು ಮುಂದೆ ಬಂದಿರುವುದಿಲ್ಲ. ಇದು ಏನನ್ನು ತಿಳಿಸುತ್ತದೆ ಎಂದರೆ ಆಪಾದಿತನ ಪರವಾಗಿ ಹಳ್ಳಿಗರು ನಿಂತಿರುವುದು ತಿಳಿದುಬರುತ್ತದೆ. ಕೊಲೆ ಮಧ್ಯಾಹ್ನ ನಡೆದಿದ್ದರೂ 1970ರ ಮಾರ್ಚ್ 12ರ ಸಂಜೆ ಮೃತ ಮಧಾಂಧಿ ಸಾವನ್ನಪ್ಪಿದನು ಎಂದು ಬಿಂಬಿಸುವಂತಹ ಪ್ರಯತ್ನವನ್ನು ಆಪಾದಿತನು ಭಯದ ವಾತಾವರಣವನ್ನು ನಿರ್ಮಾಣಮಾಡುವ ಮೂಲಕ ದೂರು ದಾಖಲಾಗದಂತೆ ತಡೆಹಿಡಿದಿರುತ್ತಾನೆ. ಹಳ್ಳಿಗರಿಗೆ ವಾಸ್ತವವಾಗಿ ಯಾವ ಕಾರಣಕ್ಕಾಗಿ ಮೃತನ ಮೇಲೆ ಆಕ್ರಮಣ ನಡೆಯಿತು ಎಂಬುದು ತಿಳಿದಿರುವುದಿಲ್ಲ ಮತ್ತು ಇಡೀ ದಿನ ಅವರೆಲ್ಲರೂ ಆಪಾದಿತನ ಸಂಶಯಕ್ಕೆ ಗುರಿಯಾಗಿರುತ್ತಾರೆ ಮತ್ತು ಅದಕ್ಕನುಸಾರವಾಗಿ ಈ ಮೊಕದ್ದಮೆಯಲ್ಲಿ ಆಪಾದಿತನೊಂದಿಗೆ ಹಳ್ಳಿಗರೆಲ್ಲರೂ ಒಳಗೊಂಡಿರುವರು. ಕ್ರಿಮಿನಲ್ ಮೊಕದ್ದಮೆಯಲ್ಲಿ ಪ್ರಥಮ ಮಾಹಿತಿ ವರದಿ ಅತಿಪ್ರಮುಖವಾದ ಪಾತ್ರವನ್ನು ವಹಿಸುತ್ತದೆ ಮತ್ತು ವಿಚಾರಣೆಯ ಸಂದರ್ಭದಲ್ಲಿ ಮುಂದಿಡಲಾದ ಮೌಖಿಕ ಸಾಕ್ಷ್ಯಗಳನ್ನು ಸಮರ್ಥಿಸುವ ಉದ್ದೇಶಕ್ಕಾಗಿ ಈ ಪ್ರಥಮ ಮಾಹಿತಿ ವರದಿಯೂ ಮೌಖಿಕ ಸಾಕ್ಷ್ಯವಾಗಿರುತ್ತದೆ. ಮೇಲಿನ ವರದಿಯ ಪ್ರಾಮುಖ್ಯತೆಯೂ ಆಪಾದಿತ ದೃಷ್ಟಿಯಿಂದ ಅಪರೂಪದ ಅತಿ ಮಹತ್ವದ ವರದಿಯಾಗಿರುತ್ತದೆ. ಎಸಗಲಾದ ಅಪರಾಧದ ಸಂಬಂಧದಲ್ಲಿ ಪೊಲೀಸರಿಗೆ ದೂರನ್ನು ದಾಖಲಿಸುವ ಸಂದರ್ಭದಲ್ಲಿ ಘಟನೆಯ ಪ್ರಾಯೋಗಿಕ ಅಂಶಗಳು ಒಳಗೊಂಡಿದ್ದರೆ ಎಸಗಲಾದ ಆ ಯಾವುದೇ ಅಪರಾಧದ ಕೃತ್ಯದ ಸನ್ನಿವೇಶಗಳ ಮುಂಚಿನ ಮಾಹಿತಿಯು ಸಂಬಂಧದಲ್ಲಿ ಪಡೆಯುವುದಕ್ಕೆ, ನಿಜವಾದ ಅಪರಾಧಿಗಳ ಹೆಸರುಗಳು ಮತ್ತು ಅವರು ವಹಿಸಿದ ಪಾತ್ರಗಳನ್ನು, ಘಟನೆ ನಡೆದಾಗ ಅಲ್ಲಿ

ಉಪಸ್ಥಿತರಿದ್ದ ಪ್ರತ್ಯಕ್ಷ ಸಾಕ್ಷಿದಾರರ ಹೆಸರುಗಳ ಸಹ ಘಟನೆಯ ವಾಸ್ತವಾಂಶಗಳನ್ನು ಪಡೆದುಕೊಳ್ಳುವುದಕ್ಕೆ ಸಹಕಾರಿಯಾಗುತ್ತವೆ. ದೂರನ್ನು ದಾಖಲಿಸಲು ವಿಳಂಬಮಾಡಿದಾಗ ಪ್ರಥಮ ಮಾಹಿತಿ ವರದಿಯ ಸಂಪೂರ್ಣವಾಗಿ ಭಿನ್ನರೀತಿಯಲ್ಲಿ ನಂತರದ ವಿಚಾರದ ಸ್ವಾರಸ್ಯಕರವಾಗಿ ರಚನೆಗೊಂಡಿರುವ ಸಾಧ್ಯತೆ ಕಂಡುಬರುತ್ತವೆ. ವಿಳಂಬದ ಕಾರಣದ ಮೇಲೆ ವರದಿಯೂ ಸ್ವಯಂಪೂರ್ಣವಾದ ಅನುಕೂಲತೆಗಳನ್ನು ಕಳೆದುಕೊಳ್ಳುವುದು ಮಾತ್ರವಲ್ಲದೆ, ರೂಪಾಂತರಗೊಂಡ, ಉತ್ಪ್ರೇಕ್ಷೆಗೊಂಡ ಅಥವಾ ಪರ್ಯಾಲೋಚಿಸುವ ಮತ್ತು ಸಮಾಲೋಚಿಸುವ ಪರಿಣಾಮದಂತೆ ದುರುದ್ದೇಶಪೂರ್ವಕ ಕತೆಯಂತೆ ಅಪಾಯಕರ ನುಸುಳುವಿಕೆಗೆ ಕಾರಣವಾಗುತ್ತವೆ. ಆದುದರಿಂದ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವಲ್ಲಿ ಆಗುವ ಅಗತ್ಯ ವಿಳಂಬವನ್ನು ತೃಪ್ತಿಕರವಾಗಿ ವಿವರಿಸಬೇಕಾಗುತ್ತವೆ. ಪ್ರಸ್ತುತ ಮೊಕದ್ದಮೆಯಲ್ಲಿ ಕೊಪಿಯಾ ಮೃತ ಮಧಾಂದಿಯ ಸೊಸೆಯಾಗಿದ್ದು, ಆಪಾದಿತನು ಮೃತನ ಮೇಲೆ ಹಲ್ಲೆಮಾಡಿ ಕೊಲೆ ಮಾಡುವಾಗ ಉಪಸ್ಥಿತಿಯಿದ್ದಳು ಎಂಬ ವಿಷಯವು ಪ್ರಾಸಿಕ್ಯೂಷನ್‌ನಿಂದ ತಿಳಿದುಬಂದಿದೆ. ವಲಂಜಿಯರಾಜು ಮೃತನ ಮಲಮಗನಾಗಿರುತ್ತಾನೆ. ಘಟನೆ ಸಂಭವಿಸಿದಾಗ ಆಪಾದಿತನಾದ ವಲಂಜಿಯರಾಜು ಅಲ್ಲಿಗೆ ಬಂದಿದ್ದ ಎಂದು ಕೋಪಿಯ ಹೇಳಿರುತ್ತಾಳೆ. ಆದರೆ, ವಲಂಜಿಯರಾಜು ಮತ್ತು ಕೊಪಿಯಾ ಇವರಿಂದ ಸಂಭವಿಸಿದ ಘಟನೆಯಾಗಿದೆ ಎಂದು ಅವರಾಗಲೀ, ಯಾರೇ ಇತರ ಹಳ್ಳಿಗರಾಗಲೀ ಹೇಳಿಕೆಯನ್ನು ನೀಡಿರುವುದಿಲ್ಲ. ಘಟನೆ ನಡೆದ 20 ಗಂಟೆಗಿಂತ ಹೆಚ್ಚಿನ ಅವಧಿಯ ನಂತರವು ಪೊಲೀಸ್ ಠಾಣೆಯಲ್ಲಿ ಯಾವುದೇ ದೂರು ದಾಖಲುಗೊಂಡಿರುವುದಿಲ್ಲ ಅಲ್ಲದೆ, ಘಟನೆ ನಡೆದ ಸ್ಥಳದಿಂದ ಪೊಲೀಸ್ ಠಾಣೆಯೂ ಎರಡು ಮೈಲಿಗಳ ಅಂತರದಲ್ಲಿದ್ದರೂ ಘಟನೆಯ ಬಗ್ಗೆ ಯಾರೊಬ್ಬರೂ ದೂರನ್ನು ದಾಖಲಿಸಿರುವುದಿಲ್ಲ. ನಮ್ಮ ಅಭಿಪ್ರಾಯದಲ್ಲಿ ಸದರಿ ಸನ್ನಿವೇಶಗಳು,

ಹಾಗೂ ಇಬ್ಬರು ಸಾಕ್ಷ್ಯದಾರರು ಸಾಕ್ಷ್ಯಗಳ ಸತ್ಯತೆಯ ಸಂಬಂಧದಲ್ಲಿ ಪರಿಗಣಿಸಬಹುದಾದ ಸಾಕಷ್ಟು ಸಂದೇಹಗಳನ್ನು ಹುಟ್ಟುಹಾಕಿದೆ ಮತ್ತು ಸಾಕ್ಷ್ಯಗಳಲ್ಲಿನ ದೌರ್ಬಲ್ಯತೆಯೂ ಅಪೀಲುದಾರ–ಆಪಾದಿತನ ಮೇಲೆ ಸಲ್ಲಿಸಿ ಅಸುರಕ್ಷಿತ ಸಾಕ್ಷ್ಯದ ಅಧಾರದ ಮೇಲೆ ನ್ಯಾಯನಿರ್ಣಯಿಸಲಾಗಿದೆ.

13. ಮೇಲೆ ಉಲ್ಲೇಖಿಸಿದ ಎರಡು ನಿರ್ಣಯಗಳನ್ನು ಗಮನಕ್ಕೆ ತಗೆದುಕೊಂಡಾಗ, ಸದರಿ ಮೊಕದ್ದಮೆಯಲ್ಲಿನ ರುಜುವಾತಾದ ಸಂಗತಿಗಳೆಂದರೆ ಘಟನೆಗೆ ಪ್ರತ್ಯಕ್ಷ ಸಾಕ್ಷಿದಾರರು ಇರುತ್ತಾರೆ. ***(ಮೇಲಿನ) ಹೆಚ್.ಸಿ. ಕರಿಗೌಡ @ ಶ್ರೀನಿವಾಸ*** ಮೊಕದ್ದಮೆಯಲ್ಲಿ, ಪ್ರಾ.ಸಾ.4 ಗಾಯಗೊಂಡಿರುತ್ತಾನೆ ಮತ್ತು ಆ ಕೂಡಲೇ ಸ್ಥಳಕ್ಕೆ ಬಂದ ಪೊಲೀಸ್ ಅಧಿಕಾರಿಯು ಆಸ್ಪತ್ರೆಗೆ ಮೃತನನ್ನು ಮತ್ತು ಪ್ರಾ.ಸಾ.4 ಮತ್ತು ಇತರ ಸಾಕ್ಷಿದಾರರನ್ನು ಸಾಗಿಸಿರುತ್ತಾರೆ. ***ತುಲಿಯಾ ಕಲಿ (ಮೇಲಿನ)*** ಮೊಕದ್ದಮೆಯಲ್ಲಿ ಮೃತನ ಸೊಸೆಯಾದ ಕೊಪಿಯಾ ಘಟನೆಯ ಪ್ರತ್ಯಕ್ಷ ಸಾಕ್ಷಿಯಾಗಿದ್ದ ವಲಂಜಿಯರಾಜುವನ್ನು ಘಟನೆ ನಡೆದ ಸ್ಥಳದ ಹತ್ತಿರದಲ್ಲಿ ಇದ್ದಾನೆಂದು ಮತ್ತು ಪೊಲೀಸರು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುವಲ್ಲಿ ಆಗಿರುವ 20 ಗಂಟೆಗಿಂತ ಹೆಚ್ಚಿನ ಅವಧಿಯ ವಿಳಂಬದ ಅಂಶವು ಸದರಿ ಮೊಕದ್ದಮೆಯನ್ನು ವಿಳಂಬದ ಅಂಶವನ್ನು ರುಜುವಾತು ಪಡಿಸುತ್ತವೆ.

14. ನಾವು, ***ದಿಲ್‌ವರ್ ಸಿಂಗ್ –ವಿರುದ್ಧ– ದೆಹಲಿ ರಾಜ್ಯ***[3] ಮೊಕದ್ದಮೆಯಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಸಹ ಅವಲೋಕಿಸಿದ್ದೇವೆ ಮತ್ತು ***ಲಲಿತ ಕುಮಾರಿ –ವಿರುದ್ಧ– ಉತ್ತರ ಪ್ರದೇಶ ಸರ್ಕಾರ ಮತ್ತು ಇತರರು***[4] ಮೊಕದ್ದಮೆಯ ಘಟನೆ ನಡೆದ ಆ ಕೂಡಲೇ ಪ್ರಥಮ ಮಾಹಿತಿ ವರದಿಯಂತೆ ಮಾಹಿತಿಯನ್ನು ನೋಂದಾಯಿಸಿಕೊಳ್ಳುವ ಪ್ರಾಮುಖ್ಯತೆಯ ಸಂಬಂಧದಲ್ಲಿ ಸ್ಪಷ್ಟವಾಗಿ ನಿರೂಪಿಸಿರುವ ತತ್ವಗಳನ್ನು ಸಹ ನಾವು ಅವಲೋಕಿಸಿದ್ದೇವೆ.

3. ಎಐಆರ್ 2007 ಎಸ್‌ಸಿ 323

4. (2014)2 ಎಸ್‌ಸಿಸಿ 1

15. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳು ಮೇಲೆ ಉಲ್ಲೇಖಿಸಿದ ನಿರ್ಣಯಗಳ ಅವಲಂಬನೆಯ ಮೇಲೆ ಸ್ಪಷ್ಟವಾಗಿ ನಿರೂಪಿಸಿದ ತತ್ವಗಳ ದೃಷ್ಟಿಕೋನದಲ್ಲಿ ಈ ಮೊಕದ್ದಮೆಯಲ್ಲಿ ಎತ್ತಲಾದ ಪ್ರಶ್ನೆಯು, ಹೀಗಿದೆ.

> ದೂರುದಾರ–ನಿಶನೆ ಪಿ.1 ಇವರು ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 162ನೇ ಪ್ರಕರಣವನ್ನು ಉಲ್ಲಂಘಿಸಿರುವರೇ ಅಥವಾ ಅವರು ನೀಡಿದ ದೂರನ್ನು ತನಿಖೆ ಕಾಲದಲ್ಲಿ ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 161ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿಕೊಂಡ ಹೇಳಿಕೆಯಾಗಿ ಮಾತ್ರವೇ ಅದನ್ನು ಪರಿಗಣಿಸಬೇಕಿದೆಯೇ?

16. ಪ್ರಾಸಿಕ್ಯೂಷನ್ ಅವರ ಪ್ರಕಾರದಂತೆ ಈ ಮೊಕದ್ದಮೆಯಲ್ಲಿನ ವಾಸ್ತವಿಕ ಕಥೆಯನ್ನು ಪರಾಮರ್ಶಿಸಿದಾಗ, ಈ ನಿರ್ದಿಷ್ಟ ಮೊಕದ್ದಮೆಯಲ್ಲಿ ಅಪರಾಧದ ಘಟನೆಯು ಅಪೀಲುದಾರ/ಆಪಾದಿತ ವಾಸವಿರುವ ಮನೆಯಲ್ಲಿ ನಡೆದಿರುತ್ತದೆ, ಮೃತಳು ಅಪೀಲುದಾರ/ಆಪಾದಿತನ ಹೆಂಡತಿಯಾಗಿರುತ್ತಾಳೆ ಮತ್ತು ಆಪಾದಿತ ತನ್ನ ವಾಸದ ಮನೆಯಲ್ಲಿ ತನ್ನ ಹೆಂಡತಿ (ಮೃತಳು) ಮತ್ತು ಸಣ್ಣ ಮಗುವಿನೊಂದಿಗೆ ವಾಸವಾಗಿರುತ್ತಾಳೆ. 25/26.12.2008 ರಂದು ರಾತ್ರಿ ಆಪಾದಿತನ ವಾಸದ ಮನೆಯಲ್ಲಿ ಅಪರಾಧದ ಘಟನೆಯು ನಡೆದಿರುತ್ತದೆ. ದೂರುದಾರ ದೂರಿನಲ್ಲಿ ಹೇಳಿರುವ ಅಂಶಗಳ ಪ್ರಕಾರ 26.12.2008 ರಂದು ಬೆಳಗಿನ ಜಾವ ಸುಮಾರು 4.30 ಗಂಟೆಯಲ್ಲಿ ಅಪೀಲುದಾರ/ಆಪಾದಿತನ ದೂರುದಾರನಿಗೆ ಮೊಬೈಲ್ ದೂರವಾಣಿಯ ಮೂಲಕ ಮೃತಳು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ, ಈ ಕೂಡಲೇ ಬರಬೇಕೆಂಬ ಮಾಹಿತಿಯ ಅಂಶವನ್ನು ತಿಳಿಸಿರುತ್ತಾರೆ. ಹಾಗೆಯೇ ದೂರುದಾರರು ಪ್ರಾ.ಸಾ.1 ಅವರು ತಮ್ಮ ಸಂಬಂಧಿಕರಿಗೆ ಅಪೀಲುದಾರರಿಂದ ಸ್ವೀಕರಿಸಿದ ಮಾಹಿತಿಯನ್ನು ಮೊಬೈಲ್ ದೂರವಾಣಿಯಲ್ಲಿ ತಿಳಿಸಿ ಈ ಕೂಡಲೇ ತಾವು ಘಟನೆನಡೆದ ಸ್ಥಳಕ್ಕೆ ಹೋಗಬೇಕೆಂದು, ನಾನು ಘಟನೆಯ ಸ್ಥಳಕ್ಕೆ ಬರುವುದಕ್ಕೆ ಸಾಕಷ್ಟು ಸಮಯ

ಹಿಡಿಯುತ್ತದೆ. ಆದುದರಿಂದ ಸಂಬಂಧಿಕರಿಗೆ ಸದರಿ ಘಟನೆಯ ಸ್ಥಳಕ್ಕೆ ಹೋಗಲು ತಿಳಿಸಿರುತ್ತಾರೆ ಅದರಂತೆ, ಸಂಬಂಧಿಗಳಾದ ಪ್ರಾ.ಸಾ.3 ಮತ್ತು 4 ಅವರುಗಳು ಘಟನೆಯ ಸ್ಥಳಕ್ಕೆ ಹೋಗಿರುತ್ತೇವೆ ಎಂದು ಪ್ರಾಸಿಕ್ಯೂಷನ್ ಸಾಕ್ಷ್ಯದಲ್ಲಿ ತನ್ನ ಸಾಕ್ಷಿಯಲ್ಲಿ ಹೇಳಿಕೆ ನೀಡಿರುತ್ತಾರೆ. ಇಲ್ಲಿ ಸಂದೇಹಕ್ಕೆ ಆಸ್ಪದವಿಲ್ಲದಂತೆ ಪ್ರಾ.ಸಾ.ಗಳಾದ 3 ಮತ್ತು 4 ಅವರು ಬೆಳಗ್ಗೆ ಸುಮಾರು 8 ಗಂಟೆ ಅಥವಾ 8.30 ಗಂಟೆಗೆ ಘಟನೆ ಸ್ಥಳಕ್ಕೆ ತಲುಪಿರುತ್ತಾರೆ. ದೂರುದಾರ ಮತ್ತು ಅವರ ಪತ್ನಿ ಬೆಳಗ್ಗೆ ಸುಮಾರು 10.30 ಗಂಟೆಗೆ ಘಟನೆಯ ಸ್ಥಳಕ್ಕೆ ತಲುಪಿರುತ್ತಾರೆ. ಅದಾಗಲೇ ಘಟನೆಯ ಸ್ಥಳಕ್ಕೆ ಪೊಲೀಸರು ಬಂದಿರುತ್ತಾರೆ. ಪ್ರಾಸಿಕ್ಯೂಷನ್ ಮೌಖಿಕ ಸಾಕ್ಷಿಗಳ ಮುಖಾಂತರ ದಾಖಲುಗೊಂಡ ಅಂಶವೇನೆಂದರೆ ಅವರೆಲ್ಲರು ಮಾಹಿತಿ ಪಡೆದು ಘಟನೆಯ ಸ್ಥಳಕ್ಕೆ ಹೋದಾಗ, ಅಪೀಲುದಾರ ಬೀಗಹಾಕಿದ ತನ್ನ ಮನೆಗೆ ಸುಮಾರು ಬೆಳಗ್ಗೆ 10.30 ಗಂಟೆಗೆ ಬಂದಾಗಲು ಅವನ ಮನೆಗೆ ಹಾಗೆಯೇ ಬೀಗ ಹಾಕಲಾಗಿರುತ್ತದೆ. ಆಪಾದಿತ/ಅಪೀಲುದಾರ ತನ್ನ ಹತ್ತಿರವಿದ್ದ ಬೀಗದ ಕೈಯಿಂದ ಬೀಗವನ್ನು ತೆಗೆದು ಮನೆಗೆ ಎಲ್ಲರೂ ಪ್ರವೇಶಿಸಿದಾಗಲೇ ಘಟನೆಯ ಸ್ಪಷ್ಟ ಚಿತ್ರಣ ಕಂಡುಬಂದಿರುತ್ತದೆ ಎಂಬ ಪ್ರಾಸಿಕ್ಯೂಷನ್ ಸಾಕ್ಷಿಗಳು ಹೇಳಿರುವ ಅಂಶದಲ್ಲಿ ಅಪೀಲುದಾರ/ಆಪಾದಿತ 26.12.2008 ರಂದು ಬೆಳಗ್ಗೆ ಸುಮಾರು 10.30 ಗಂಟೆಗೆ ಕೊಪ್ಪಳದಿಂದ ಬಂದಿರುತ್ತಾನೆಂದು. ಆ ದಿನದ ರಾತ್ರಿ ಅವನು ಮನೆಯಲ್ಲಿ ಇರಲಿಲ್ಲ ಎಂಬ ಅಂಶದಲ್ಲಿ ಯಾವುದೇ ಸಂದೇಹವಿಲ್ಲ ಆದರೆ ಸದರಿ ಅಭಿಪ್ರಾಯವನ್ನು ಎಲ್ಲಾ ಸಾಕ್ಷಿದಾರರು ನಿರಾಕರಿಸಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿದಾರರಾದ ಪ್ರಾ.ಸಾ.1–ಮೋಹನ್, ಪ್ರಾ.ಸಾ.2–ಮಂಜುಳ, ಪ್ರಾ.ಸಾ.3–ಸೀಮಾ ಮತ್ತು ಪ್ರಾ.ಸಾ.5–ಅಶೋಕ ಇವರು ನೀಡಿದ ಹೇಳಿಕೆಯಲ್ಲಿ ಸದರಿ ಮನೆಯ ಬೀಗದ ಕೈಹೊಂದಿದ್ದ ಆಪಾದಿತನು ಬೆಳಗ್ಗೆ 10.30 ಗಂಟೆಯಲ್ಲಿ ಪೊಲೀಸರೊಂದಿಗೆ ಘಟನೆಯ ಸ್ಥಳಕ್ಕೆ ಬಂದು ತನ್ನಲ್ಲಿದ್ದ ಬೀಗದ ಕೈಯಿಂದ ಬೀಗಹಾಕಿದ ಮನೆಯನ್ನು ತೆರೆದು ಒಳಪ್ರವೇಶಿಸಿರುತ್ತಾನೆ ಅಲ್ಲಿಯವರೆಗೂ ಘಟನೆಯ ಬಗ್ಗೆ ನಮಗ್ಯಾರಿಗೂ ಸ್ಪಷ್ಟವಾದ ಅರಿವಿರುವುದಿಲ್ಲ ಎಂದು ನಿರೂಪಿಸುತ್ತಾರೆ. ಆದುದರಿಂದ ಅಧಿವಿಚಾರಣಾ ಕಾಲಾವಧಿಯಲ್ಲಿ ದಾಖಲಿಸಿದ ವಸ್ತುವಿಷಯಗಳ ಮಂಡನೆಯನ್ನು ಗಮನಕ್ಕೆ

ತಂದುಕೊಂಡಾಗ ಮನೆಯ ಹೊರಗೆ ಅಪೀಲುದಾರ/ಆಪಾದಿತ ಬೆಳಗ್ಗೆ ಸುಮಾರು 10.30 ಗಂಟೆಗೆ ಮನೆಯ ಹತ್ತಿರ ಪೊಲೀಸರು ಒಳಗೊಂಡಂತೆ ಇತರ ಎಲ್ಲಾ ವ್ಯಕ್ತಿಗಳು ನೆರದಿರುವುದು ಹಾಗೂ ಅವರೆಲ್ಲರಿಗೆ ಮನೆಯ ಒಳಗೆ ನಡೆದಿರುವ ಅಪರಾಧವು ಆತ್ಮಹತ್ಯೆಯೋ ಅಥವಾ ಅದೊಂದು ನರಹತ್ಯಯೋ ಎಂಬುದು ಯಾರೊಬ್ಬರಿಗೂ ಸ್ಪಷ್ಟವಾಗಿ ತಿಳಿದಿರುವುದಿಲ್ಲ. ಅಲ್ಲಿಯವರೆಗೂ ಪೊಲೀಸರಿಗೂ ಸಹ ಅಪರಾಧ ಘಟನೆಯ ಬಗ್ಗೆ ನಿಖರವಾದ ಮಹಿತಿಯೂ ತಿಳಿದಿರುವುದಿಲ್ಲ. ಅದಲ್ಲದೆ, ಸರ್ವೋಚ್ಚ ನ್ಯಾಯಾಲಯವು ಮೇಲಿನ ಲಲಿತ ಕುಮಾರಿ ಮೊಕದ್ದಮೆಯಲ್ಲಿ ನೀಡಿದ ನಿರ್ಣಯದಲ್ಲಿ ಅದು ಅಭಿವ್ಯಕ್ತಿಸಿದ ಅಭಿಪ್ರಾಯಗಳು ಮುಖ್ಯ ಟಿಪ್ಪಣಿ 'ಎ' ಭಾಗದಲ್ಲಿ ಪ್ಯಾರಾ 3ರಲ್ಲಿ ದಾಖಲುಗೊಂಡಿದೆ, ಅಭಿವ್ಯಕ್ತಿಸಿದ ಅಭಿಪ್ರಾಯಗಳು ಈ ಕೆಳಗಿನಂತಿದೆ:

> "ಏನೇ ಆದರೂ, ಮಾಹಿತಿಯನ್ನು ಸ್ವೀಕರಿಸಿ, ಪ್ರಾಥಮಿಕ ತನಿಖೆ ನಡೆಸಬಹುದಾದ – ವೈವಾಹಿಕ ವಿವಾದ/ಕುಟುಂಬ ವಿವಾದ, ವಾಣಿಜ್ಯ ಅಪರಾಧಗಳು, ವೈದ್ಯಕೀಯ ನಿರ್ಲಕ್ಷತೆಯ ಮೊಕದ್ದಮೆಗಳು, ಭ್ರಷ್ಟಾಚಾರ ಮೊಕದ್ದಮೆಗಳ ಸಂಬಂಧದಲ್ಲಿ ಮಾಹಿತಿಯನ್ನು ಸ್ವೀಕರಿಸಿ, ಪ್ರಾಥಮಿಕ ತನಿಖೆಯಲ್ಲಿ ಅಪರಾಧವು ಸಂಜ್ಞೇಯವಾದುದು ಎಂದು ಖಚಿತಗೊಳ್ಳುವವರೆಗೆ ಅಥವಾ ಮೊಕದ್ದಮೆಗಳಲ್ಲಿ ಅಪರಾಧ ವ್ಯವಹರಣೆಗಳು ಪ್ರಾರಂಭಿಸಲು ಅಸಾಮಾನ್ಯ ವಿಳಂಬ/ಕರ್ತವ್ಯ ಲೋಪವಿರುವಂತಹ ನಿರೂಪಣೆಗಳು ಇದ್ದಾಗ ಮೊಕದ್ದಮೆ ಸಂಜ್ಞೇಯವಾದ ಅಪರಾಧವೆಂದಾಗಲೀ ಅಥವಾ ಸಂಜ್ಞೇಯವಲ್ಲದ ಅಪರಾಧವೆಂದಾಗಲೀ ಪ್ರಕಟಿಸಬಾರದು ಮತ್ತು ಈ ಎಲ್ಲಾ ಮೊಕದ್ದಮೆಗಳಲ್ಲಿ ಪ್ರಾರಂಭಿಕ ತನಿಖೆಯು ದಸ್ತಗಿರಿ ಮಾಡುವ ವ್ಯಾಪಕತೆಯನ್ನು ಹೊಂದಿರುವುದಿಲ್ಲ."

ಆದುದರಿಂದ, ನಾವು ಈ ಮೊಕದ್ದಮೆಯನ್ನು ಮೇಲೆ ನಿರೂಪಿಸಿದಂತೆ ಪರ್ಯಾಲೋಚಿಸಿದ್ದೇವೆ, ಅದರಂತೆ ಘಟನೆಯೂ ವಾಸದ ಮನೆಯಲ್ಲಿ ನಡೆದಿರುತ್ತದೆ. ಪ್ರಾಸಿಕ್ಯೂಷನ್ ಸಾಕ್ಷಿಗಳ ಸಾಕ್ಷ್ಯದಂತೆ, ಘಟನೆ ನಡೆದ ಮನೆಗೆ ಬೆಳಿಗ್ಗೆ 10.30 ಗಂಟೆಯವರೆಗೂ ಬೀಗವನ್ನು ಹಾಕಲಾಗಿತ್ತು. ಮನೆಯೊಳಗೆ ಸಂಜ್ಞೇಯ ಅಪರಾಧ ನಡೆದಿರುವ ಬಗ್ಗೆ ಪೊಲೀಸರಿಗೆ ಖಚಿತವಾದ ಮಾಹಿತಿಯೂ ಇರುವುದಿಲ್ಲ. ಏಕೆಂದರೆ, ದೂರುದಾರ–ಪ್ರಾ.ಸಾ.1 ಹೇಳಿರುವ ಪ್ರಕಾರದಂತೆ ಆಪಾದಿತನು 26.12.2008ರ ಬೆಳಗಿನ ಜಾವ 4.30 ಗಂಟೆಗೆ ಮೃತಳು ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಮಾಹಿತಿ ನೀಡಿರುತ್ತಾನೆ. ಆದರೆ ಪ್ರಾಸಿಕ್ಯೂಷನ್ ಸಾಕ್ಷಿಗಳ ಸಾಕ್ಷ್ಯದಲ್ಲಿ ಆಪಾದಿತನು ಮೃತಳು ವಿಷವನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಹೇಳಿರುತ್ತಾನೆ. ಇಲ್ಲಿ ಆಪಾದಿತನು ದೂರುದಾರನಿಗೆ ಹಾಗೂ ಇತರ ಸಾಕ್ಷಿದಾರರಿಗೆ ವಿಭಿನ್ನವಾಗಿ ಮಾಹಿತಿ ನೀಡಿರುವುದು ಕಂಡುಬರುತ್ತದೆ, ಅಲ್ಲದೆ ಈ ವಸ್ತುವಿಷಯವನ್ನು ಅವಲೋಕಿಸಿದಾಗ ನಿಖರವಾಗಿ ಅಲ್ಲಿ ಏನು ನಡೆದಿದೆ ಎಂಬುದು ಯಾರಿಗೂ ತಿಳಿದುಬಂದಿರುವುದಿಲ್ಲ. ಆದುದರಿಂದ, ಅಪೀಲುದಾರ/ಆಪಾದಿತ ಪರವಾಗಿ ಮಾನ್ಯ ನ್ಯಾಯವಾದಿಗಳು ನಿದರ್ಶನ ರೂಪದಲ್ಲಿ ನೀಡಿದ ನಿರ್ಣಯಗಳಲ್ಲಿನ ವಾಸ್ತಾವಾಂಶಗಳನ್ನು ಮತ್ತು ಸನ್ನಿವೇಶಗಳನ್ನು ಅವಲೋಕಿಸಿದಾಗ ಮತ್ತು ಈ ಸದರಿ ಮೊಕದ್ದಮೆಯಲ್ಲಿ ವಾಸದ ಮನೆಯೊಳಗೆ ಘಟನೆ ನಡೆದಿರುತ್ತದೆ. ಆ ವಾಸದ ಮನೆಯ ಗಂಡ–ಹೆಂಡತಿ ಮತ್ತು ಅವರ ಮಗು ಮಾತ್ರವೇ ವಾಸವಾಗಿರುತ್ತಾರೆ. ನಾವು ಮೇಲೆ ಚರ್ಚೆ ಮಾಡಿದಂತೆ ವಿಳಂಬಕ್ಕೆ ಕಾರಣಗಳನ್ನು ಮತ್ತು ಸಾಕ್ಷ್ಯಗಳನ್ನು ಪರ್ಯಾಲೋಚಿಸಿದಾಗ ದೂರುದಾರ ನಿಶಾನೆ ಪಿ.1 ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 162ನೇ ಪ್ರಕರಣವನ್ನು ಉಲ್ಲಂಘಿಸಿರುವುದಿಲ್ಲ ಎಂಬುದು ನಮ್ಮ ಸ್ಪಷ್ಟವಾದ ಅಭಿಪ್ರಾಯೋಕ್ತಿಯಾಗಿದೆ ಮತ್ತು ನಿಶಾನೆ ಪಿ.1 ದಾಖಲಿಸಿದ ಹೇಳಿಕೆಯನ್ನು ತನಿಖೆಯ ಅವಧಿಯಲ್ಲಿ ಕ್ರಿಮಿನಲ್ ದಂಡ ಪ್ರಕ್ರಿಯಾ ಸಂಹಿತೆಯ 161ನೇ ಪ್ರಕರಣದ ಅಡಿಯಲ್ಲಿ ಮಾತ್ರವೇ ಪರಿಗಣಿಸುವ ಅಗತ್ಯವಿಲ್ಲವೆಂದು ಸ್ಪಷ್ಟವಾಗಿ ನಾವು ನಿರೂಪಿಸುತ್ತೇವೆ. ಆದುದರಿಂದ ಅಪೀಲುದಾರರ/ಆಪಾದಿತನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು

ಸದರಿ ಮೊಕದ್ದಮೆಗೆ ನಿದರ್ಶನ ಪೂರ್ವಕವಾಗಿ ನೀಡಿದ ನಿರ್ಣಯಗಳು ಅಪೀಲುದಾರರಿಗೆ ಯಾವುದೇ ರೀತಿಯಲ್ಲೂ ಸಹಾಯಕಾರಿಯಾಗಿರುವುದಿಲ್ಲ ಮತ್ತು ಅದು ಅಪೀಲುದಾರನಿಗೆ ಯಾವುವೇ ನೆರವನ್ನು ನೀಡುವುದಿಲ್ಲ.

17. ಪ್ರಾಸಿಕ್ಯೂಷನ್ ಸಾಕ್ಷಿದಾರರ ಪಾಟೀ ಸವಾಲನ್ನು ಅವಲೋಕಿಸಿದಾಗ, ಆಪಾದಿತನ ಪ್ರತಿವಾದವೆಂದರೆ ಅವನ ಹೆಂಡತಿ ಅಶ್ವಿನಿ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂಬುದಾಗಿದೆ. ಆದರೆ ನಿಶಾನೆ ಪಿ.23 ರಲ್ಲಿರುವ ಮರಣೋತ್ತರ ವರದಿಯಲ್ಲಿ ಶವಪರೀಕ್ಷೆ ನಡೆಸಿದ ವೈದ್ಯರು ದೇಹದ ಹೊರಭಾಗದಲ್ಲಿ ಆಗಿರುವ ಗಾಯಗಳನ್ನು ಗಮನಕ್ಕೆ ತಂದುಕೊಂಡು ಈ ಕೆಳಗಿನಂತೆ ಮರಣೋತ್ತರ ವರದಿಯಲ್ಲಿ ದಾಖಲಿಸಿರುವರು:–

> “ಶವದ ಕುತ್ತಿಗೆಯ ಮುಂಭಾಗದಲ್ಲಿ 4 ಕಡೆ ತರಿಚಿದ ಗಾಯವು ವಕ್ರವಕ್ರವಾಗಿ ನಿರಂತರವಾಗಿ ಜಜ್ಜು ಗಾಯವಾಗಿರುತ್ತವೆ ಮತ್ತು ಕುತ್ತಿಗೆ ಭಾಗದ ಚರ್ಮವು ಕಂದು ಬಣ್ಣಕ್ಕೆ ತಿರುಗಿರುತ್ತವೆ. ಈ ತರಚು ಗಾಯಗಳು ವೃತ್ತಾಕಾರದಲ್ಲಿ ಕಂಡುಬಂದಿದೆ ಮತ್ತು ಗಾಯಗಳ 1.5 ಸೆಂ.ಮೀ. ವ್ಯಾಸದಲ್ಲಿದೆ. ಕುತ್ತಿಗೆಯ ಸುತ್ತಲಿನ ಭಾಗವು ಜಜ್ಜುಗಾಯಗಳಿಂದ ಮತ್ತು ಗಾಯಗಳು ಒತ್ತೊತ್ತಾಗಿಯೇ ಆಗಿರುತ್ತವೆ. ಕುತ್ತಿಗೆ ಕೂಡುಮೂಳೆ ಇರುವ ಗುರುತಿನ ಕೆಳಗಿನ 5 ಸೆಂ.ಮೀ. ಜಾಗದಿಂದ ಜಜ್ಜುಗಾಯಗಳು ಪ್ರಾರಂಭವಾಗಿರುವುದರೊಂದಿಗೆ ಮೇಲಿನವರೆಗೂ ನಿರಂತರವಾಗಿ ತರಚು ಗಾಯವಾಗಿರುತ್ತದೆ. ಥೈರಾಯ್ಡ್ ಮೃದ್ವಸ್ಥಿಯ ಮಟ್ಟದಲ್ಲಿ ಸಮಾನ ಮಧ್ಯಭಾಗದ ಎಡಭಾಗಕ್ಕೆ ಕತ್ತರಿಸಿದಂತೆ ವಕ್ರವಾಗಿ ಕೆಳ ಭಾಗದವರೆಗೂ ಗಾಯವು ಹಾದುಹೋಗಿರುವುದು ಕಂಡುಬಂದಿದೆ ಮತ್ತು ಗಾಯವು 8 ಸೆಂ.ಮೀ. ಜಾಗದಲ್ಲಿವೆ. ಎಡಭಾಗದ ಮಧ್ಯಭಾಗಕ್ಕೆ ಪಾರ್ಶ್ವದಲ್ಲಿ ಕೂಡುಮೂಳೆಯ ಕೆಳಗೆ

> 4 ಸೆಂ.ಮೀ.ನಷ್ಟು ಗಾಯವು ಕಂಡುಬಂದಿದೆ. ಒಟ್ಟಾರೆ ಕುತ್ತಿಗೆಯ ಸುತ್ತಲಿನ ಜಜ್ಜುಗಾಯದೊಂದಿಗೆ ಆಗಿರುವ ತರಚು ಗಾಯದ ಒಟ್ಟು ಅಳತೆ 10 X 2 ಸೆಂ.ಮೀ. ನಷ್ಟಿದೆ."

ಪ್ರಾ.ಸಾ.24ರಲ್ಲಿ ವೈದ್ಯರು ತಮ್ಮ ಮೌಖಿಕ ಸಾಕ್ಷ್ಯದಲ್ಲೂ ಸಹ ಸದರಿ ಗಾಯುಗಳ ಕುರಿತು ಹೇಳಿಕೆ ನೀಡಿರುತ್ತಾರೆ. ಹೇಳಿಕೆಯು ಮೇಲಿನ ಪ್ಯಾರಾಗ್ರಾಫ್‌ನಲ್ಲಿರುವಂತೆಯೇ ವಿವರವಾಗಿ ನಿರೂಪಿಸಿರುತ್ತಾರೆ.

18. ವೈದ್ಯರು ತಮ್ಮ ಮೌಖಿಕ ಸಾಕ್ಷ್ಯದಲ್ಲಿ ಕತ್ತಿನ ತರಚುಗಾಯ ಮತ್ತಷ್ಟು ಅಂಗಚ್ಛೇದನಕ್ಕೆ ಕಾರಣವಾಗಿರುವ ಬಗ್ಗೆ ಮತ್ತು ಮೇಲೆ ಹೇಳಿದ ಭಾಗದಲ್ಲಿನ ಸಂವಾದಿ ಭಾಗಗಳಲ್ಲಿ ರಕ್ತ ಹೆಪ್ಪುಗಟ್ಟಿವಿಕೆ ಕಂಡುಬಂದಿರುವ ಬಗ್ಗೆ ಮತ್ತು ಜಜ್ಜುಗಾಯ ಮತ್ತು ತರಚುಗಾಯಗಳ ಬಗ್ಗೆ ವಿವರವಾಗಿ ನಿರೂಪಿಸಿರುತ್ತಾರೆ. ಥೈರಾಯ್ಡಿ ಗ್ರಂಥಿ, ಮೃದ್ವಸ್ಥಿ ಮತ್ತು ಕಿರುನಾಲಿಗೆಯ ಮೇಲ್ಭಾಗದಲ್ಲಿ ಕೆಲಭಾಗಗಳಲ್ಲಿ ರಕ್ತ ಹೆಪ್ಪುಗಟ್ಟಿರುವುದನ್ನು ಕಂಡುಬಂದಿರುತ್ತವೆ. ಅಂತಿಮವಾಗಿ ವೈದ್ಯರು ಸಾವಿನ ಕಾರಣದ ಸಂಬಂಧದಲ್ಲಿ ಮರಣವು ಕೈಗಳಿಂದ ಕತ್ತು ಹಿಸುಕಿದ (ಉಸಿರುಗಟ್ಟಿಸಿ) ಕಾರಣದಿಂದಲೇ ಮರಣ ಸಂಭವಿಸಿದೆ ಎಂದು ತಮ್ಮ ಅಂತಿಮ ಅಭಿಪ್ರಾಯದಲ್ಲಿ ಹೇಳಿಕೆ ನೀಡಿರುತ್ತಾರೆ. ಪ್ರಾ.ಸಾ.24ರ ಪಾಟೀ–ಸವಾಲಿನ ಅವಧಿಯಲ್ಲಿ ವ್ಯಕ್ತಿಯೂ ಮೃದುಬಟ್ಟೆ ಅಥವಾ ಸೀರೆಯ ಮೂಲಕವು ನೇಣುಹಾಕಿಕೊಂಡ ಪಕ್ಷದಲ್ಲೂ ಮೇಲೆ ನಮೂದಿಸಿದಂತಹ ಗಾಯಗಳು ಆಗುವ ಸಂಭವವಿರುತ್ತವೆ ಎಂದು ವೈದ್ಯರನ್ನು ಕೇಳಿದಾಗ ವೈದ್ಯರು ಅದನ್ನು ನಿರಾಕರಿಸಿರುತ್ತಾರೆ. ನೇಣು ಹಾಕಿಕೊಂಡಾಗ ಆಗುವ ಗಾಯದ ಸ್ವರೂಪವೇ ಬೇರೆ ರೀತಿಯಲ್ಲಿರುತ್ತವೆ ಎಂದು ತಿಳಿಸಿರುತ್ತಾರೆ. ಅದರಂತೆಯೇ ಈ ಸಂಬಂಧದಲ್ಲಿ ವೈದ್ಯರು ತಪ್ಪಾದ ವರದಿಯನ್ನು ನೀಡಿರುತ್ತಾರೆ ಎಂಬ ತನಿಖಾಧಿಕಾರಿಯ ಅಭಿಪ್ರಾಯವನ್ನು ವೈದ್ಯರು ನಿರಾಕರಿಸಿರುತ್ತಾರೆ. ಮರಣವು ಕೈಗಳಿಂದ ಕತ್ತುಹಿಸುಕುವ (ಉಸಿರುಕಟ್ಟಿಸುವ) ಮೂಲಕವೇ ಸಂಭವಿಸಿರುತ್ತದೆ ಎಂದು ತನ್ನ ಅಭಿಪ್ರಾಯಕ್ಕೆ ವೈದ್ಯರು ಬದ್ಧರಾಗಿರುತ್ತಾರೆ. ಆದುದರಿಂದ ಪ್ರಾ.ಸಾ.24ರ

ಪಾಟೀ–ಸವಾಲನ್ನು ಅವಲೋಕಿಸಿದಾಗ ವೈದ್ಯರು ಮರಣೋತ್ತರ ವರದಿಯಲ್ಲಿ ಏನನ್ನು ದಾಖಲಿಸಿರುತ್ತಾರೋ ಅದೇ ಅಂಶಗಳನ್ನು ಅವರು ಮೌಖಿಕ ಸಾಕ್ಷ್ಯವಾಗಿ ಹೇಳಿರುತ್ತಾರೆ. ವೈದ್ಯರಿಂದ ತಪ್ಪಾದ ಅಂಶಗಳಾವುವು ಕಂಡುಬಂದಿರುವುದಿಲ್ಲ. ವೈದ್ಯರು ಮೌಖಿಕವಾಗಿ ಹೇಳಿದ ಸಾಕ್ಷ್ಯವು ತಪ್ಪಾಗಿದೆ ಎಂಬುದಕ್ಕೆ ಸಮರ್ಥವಾದ ಅಂಶಗಳೇ ಕಂಡುಬರುತ್ತಿಲ್ಲ. ಪ್ರಾಸಿಕ್ಯೂಷನ್‌ನ ಕೆಲಸಾಕ್ಷಿಗಳು ಮೃತನ ಸಂಬಂಧಿಕರಾಗಿದ್ದ ಅವರನ್ನು ವಿಚಾರಣೆಗೆ ಗುರಿಪಡಿಸಿದಾಗ ಸಾಕ್ಷಿದಾರರಲ್ಲಿ ಕೆಲವರಿಗೆ ಆಪಾದಿತನು ಮೃತಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂದು ಮಾಹಿತಿ ನೀಡಿರುವುದನ್ನ ಪ್ರಾಸಿಕ್ಯೂಷನ್ ಸಾಕ್ಷಿಗಳು ಮೌಖಿಕ ಸಾಕ್ಷ್ಯದಲ್ಲಿ ತಿಳಿಸಿರುತ್ತಾರೆ. ಈ ಸಂಬಂಧದಲ್ಲಿ ಪ್ರಾಸಿಕ್ಯೂಷನ್ ಅವರು ನಿಶಾನೆ ಪಿ.17 ರಲ್ಲಿರುವ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವರು. ಈ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯ ಅಭಿಪ್ರಾಯವು ಈ ಕೆಳಗಿನಂತಿದೆ:–

> “ವಿಷಗಳ, ಕೀಟನಾಶಕಗಳ, ನಿದ್ರಾಜನಕಗಳ, ವಿಷಕಾರಕ ರಾಸಾಯನಿಕಗಳು, ನಂಜಿನ ಲೋಹಕಾರಕಗಳು ಮತ್ತು ಸಕ್ರಿಯ ವಿಷಕಾರಕ ಆಯಾನಗಳ ಶೇಷ ಭಾಗವು ದೇಹದ ಯಾವುದೇ ಭಾಗದಲ್ಲೂ ಕಂಡುಬಂದಿರುವುದಿಲ್ಲ ಎಂದು ನಿರೂಪಿಸಿದೆ."

ಇದರಿಂದ ನಿಶಾನೆ ಪಿ.17ರಲ್ಲಿ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯಲ್ಲಿ ಪ್ರಯೋಗಾಲಯದಲ್ಲಿ ಹೊಟ್ಟೆಯ ಪಚನಕ್ರಿಯ ಭಾಗಗಳನ್ನು ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿ ಯಾವುದೇ ವಿಷಕಾರಕ ವಸ್ತುಗಳು ಕಂಡುಬಂದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿರುತ್ತದೆ. ಪ್ರಾ.ಸಾ.24ರ ಮೌಖಿಕ ಸಾಕ್ಷ್ಯದೊಂದಿಗೆ ಮರಣೋತ್ತರ ವರದಿಯನ್ನು ಮತ್ತು ನಿಶಾನೆ ಪಿ.17ರಲ್ಲಿನ ದಸ್ತಾವೇಜನ್ನು ಅವಲೋಕಿಸಿದಾಗ ಅದು ಮೃತಳು ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಅಥವಾ ಯಾವುದೇ ವಿಷವನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯನ್ನು ಸಂಪೂರ್ಣವಾಗಿ ನಿರಾಕರಿಸಲಾಗುತ್ತದೆ. ಆದುದರಿಂದ ಆಪಾದಿತನಿಗೆ ಮರಣವು ಆತ್ಮಹತ್ಯೆಯಿಂದ

ಸಂಭವಿಸಿದೆ ಎಂದು ಸುಸ್ಥಾಪಿಸಲು ಸಾಧ್ಯವಾಗಿಲ್ಲ ಮತ್ತು ಈ ವ್ಯತಿರಿಕ್ತ ವಸ್ತುವಿಷಯಗಳು ಮತ್ತು ಮೃತಳ ಸಂಬಂಧಿಕರಾದ ಪ್ರಾ.ಸಾ.3, 4 ಮತ್ತು 5 ಅಂದರೆ ಮೃತರ ಪೋಷಕರ / ತಂದೆ–ತಾಯಿಯರು ನೀಡಿದ ಮೌಖಿಕ ಸಾಕ್ಷ್ಯದಲ್ಲಿ ಇದೊಂದು ನರಹತ್ಯೆ ಸಾವಾಗಿದೆಯೇ ಹೊರತು ಇದು ಆತ್ಮಹತ್ಯೆ ಸಾವಾಗಿರುವುದಿಲ್ಲ ಎಂಬುದನ್ನು ಸಾಕ್ಷ್ಯಗಳು ಸಮರ್ಥವಾಗಿ ನಿರೂಪಿಸುತ್ತವೆ.

19. ಅಪೀಲುದಾರ–ಆಪಾದಿತ ಮುಖ್ಯವಾದ ಪ್ರತಿವಾದವು ಹೀಗಿದೆ ದಿನಾಂಕ 25.12.2008ರ ಬೆಳಗ್ಗೆ ಸುಮಾರು 9.00 ಗಂಟೆ ಅಥವಾ 9.30 ಗಂಟೆಯಿಂದ 26.12.2008ರ ಬೆಳಿಗ್ಗೆ 10.30 ಗಂಟೆಯವರೆಗೂ ಪ್ರತಿವಾದಿಯಾದ ಆಪಾದಿತನು ಮನೆಯಲ್ಲಿ ಇರುವುದಿಲ್ಲ. ಆಪಾದಿತನು ತನ್ನ ಮಗುವಿನೊಂದಿಗೆ ಕೊಪ್ಪಳಕ್ಕೆ ಹೋಗಿರುತ್ತಾನೆ ಎಂಬುದು ಪ್ರತಿವಾದಿಯ ವಾದವಾಗಿರುತ್ತವೆ. ಘಟನೆ ನಡೆದ ಸ್ಥಳದಲ್ಲಿ ನಾನಿಲ್ಲ ಎಂಬುದಕ್ಕೆ ಬೇರೆಕಡೆ ಇದ್ದಾನೆಂಬುದಕ್ಕೆ ದಾಖಲೆಯನ್ನು ಒದಗಿಸಿ ವಾದವನ್ನು ಮಂಡಿಸಲಾಗಿರುತ್ತದೆ. ಮೃತಳು ಮತ್ತು ಆಪಾದಿತನು ಮದುವೆಯಾಗಿರುವ ದಂಪತಿಗಳು, ಅವರಿಗೆ ಒಂದು ಚಿಕ್ಕ ಮಗುವು ಇರುತ್ತದೆ. ದಂಪತಿಗಳು ತಮ್ಮ ಮಗುವಿನೊಂದಿಗೆ ಸದರಿ ವಾಸದ ಮನೆಯಲ್ಲಿ ವಾಸಿಸುತ್ತಿದ್ದರು, ಅದೇ ವಾಸದ ಮನೆಯಲ್ಲಿ ಆ ರಾತ್ರಿ ಘಟನೆ ನಡೆದಿರುವಾಗ ಸಹಜವಾಗಿಯೇ ಮನೆಯಲ್ಲಿ ಗಂಡ–ಹೆಂಡತಿ ಮತ್ತು ಅವರ ಮಗು ಅಲ್ಲಿತ್ತು ಎಂಬುದು ಪೂರ್ವಗ್ರಹಿಕೆಯಾಗಿರುತ್ತದೆ. ಆದರೆ ಅಪೀಲುದಾರ/ಆಪಾದಿತನು ನಿರ್ದಿಷ್ಟ ಪ್ರತಿವಾದದ ವಾದವಾಗಿ ತಾನು ಆ ರಾತ್ರಿ ಮನೆಯಲ್ಲಿ ಇರಲಿಲ್ಲವೆಂಬ ಅನಿವಾರ್ಯ ವಾದಪ್ರತಿ ವಾದವನ್ನು ಸಮರ್ಥಿಸುವುದಕ್ಕೆ ಸದರಿ ಪ್ರತಿವಾದದೊಂದಿಗೆ ಸಮರ್ಪಕವಾದ ಮತ್ತು ಸ್ವೀಕರಿಸಬಹುದಾದ ವಸ್ತುವಿಷಯಗಳನ್ನು ಮಂಡಿಸಬೇಕಾಗುತ್ತದೆ. ಅದರಂತೆ ಅಪೀಲುದಾರ–ಆಪಾದಿತ ಸ್ವತಃ ತಾನಾಗಿಯೇ ಪ್ರಾ.ಸಾ.1 ಆಗಿರುವುದರಲ್ಲಿ ಯಾವುದೇ ಸಂದೇಹ ಇರುವುದಿಲ್ಲ. ಪ್ರತಿವಾದಿ ಸಾಕ್ಷಿಯಾಗಿ ಆಪಾದಿತನು ತನ್ನ ಸಾಕ್ಷಿಯಲ್ಲಿ ಆಪಾದಿತನು 2008ರಲ್ಲಿ ಧಾರವಾಡ–ಹುಬ್ಬಳ್ಳಿ ಮಹಾನಗರ ಪಾಲಿಕೆಯ ಧಾರವಾಡ ಕಚೇರಿಯ ವಿದ್ಯುಚ್ಛಕ್ತಿ ಇಲಾಖೆಯ ಕಿರಿಯ ಇಂಜಿನಿಯರ್ ಆಗಿ ಕೆಲಸ

ನಿರ್ವಹಿಸುತ್ತಿರುತ್ತಾನೆ. ಆ ಸಂದರ್ಭದಲ್ಲಿ ಆಪಾದಿತ ಮತ್ತು ಅವನ ಹೆಂಡತಿ ಧಾರವಾಡ/ಸೈದಪುರದಲ್ಲಿ ವಾಸವಾಗಿರುತ್ತಾರೆ. ಹೀಗಿರುವಾಗ ಆಪಾದಿತ ಮತ್ತು ಮೃತ ಅಶ್ವಿನಿ ಬಾಡಿಗೆ ಮನೆಯ ಮಾಲೀಕರ ಮನೆಯಲ್ಲಿ ಸಮಾರಂಭ ಆಯೋಜನೆಗೊಂಡ ಕಾರಣ ಸದರಿ ಸೈದಪುರದ ಮಾಲೀಕರು ಮನೆಯನ್ನು ಒಂದು ತಿಂಗಳ ಅವಧಿಯೊಳಗಾಗಿ ತೆರವು ಮಾಡಬೇಕೆಂದು ಆಪಾದಿತನಿಗೆ ಸೂಚಿಸಿರುತ್ತಾರೆ. ಅದರಂತೆ ಸದರಿ ಘಟನೆ ನಡೆದ 20–25 ದಿನಗಳ ಮುಂಚೆ ಆಪಾದಿತ ಮತ್ತು ಆತನ ಹೆಂಡತಿಯಾದ ಅಶ್ವಿನಿ ಗುಲಗಂಜಿಕೊಪ್ಪದಲ್ಲಿರುವ ದುರ್ಘಟನೆ ನಡೆದ ಬಾಡಿಗೆ ಮನೆಗೆ ತನ್ನ ವಾಸವನ್ನು ಸ್ಥಳಾಂತರಿಸಿರುವ ವಿಷಯವನ್ನು ಆಪಾದಿತನು ವಿವರಿಸಿರುತ್ತಾನೆ. ಮುಂದುವರೆದು ಆಪಾದಿತನು 25.12.2008ರ ಬೆಳಿಗ್ಗೆ 9.00 ಗಂಟೆಯಿಂದ 9.30 ಗಂಟೆಯ ಸುಮಾರಿಗೆ ಅವನು ತನ್ನ ಮಗ ಅಭಿನಂದನೊಂದಿಗೆ ಕೊಪ್ಪಳಕ್ಕೆ ಹೋಗಿರುತ್ತಾನೆ. ಆಪಾದಿತನು ಕೊಪ್ಪಳಕ್ಕೆ ಹೋದ ಸಮಯದಲ್ಲಿ ಅಂದರೆ 26.12.2008ರ ಬೆಳಗ್ಗೆ 6.00 ಗಂಟೆಯಿಂದ 6.30 ಗಂಟೆಯ ಸುಮಾರಿಗೆ ಅವನ ಹೆಂಡತಿಯ ಮರಣದ ವಿಷಯ ಅವನಿಗೆ ತಿಳಿದುಬರುತ್ತದೆ. ಆಪಾದಿತನಿಗೆ ಈ ವಿಷಯವನ್ನು ಅವನ ಮನೆಯ ಮಾಲೀಕರಾದ ಬಸವರಾಜು ಮತ್ತು ಅವನ ಭಾವಮೈದುನ ವಿರೂಪಾಕ್ಷಪ್ಪ ಅವರು ದೂರವಾಣಿಯ ಮೂಲಕ ಅಶ್ವಿನಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆಂಬ ಮಾಹಿತಿಯನ್ನು ಅವನಿಗೆ ನೀಡಿರುತ್ತಾರೆ. ಆಪಾದಿತನ ಹೆಂಡತಿಯ ಬಳಿಯಲ್ಲಿ ಸಹ ಮೊಬೈಲ್ ದೂರವಾಣಿ ಇತ್ತು. ಸದರಿ ಬಸವರಾಜು ಮತ್ತು ವಿರೂಪಾಕ್ಷಪ್ಪ ಅವರೂ ಪ್ರಾ.ಸಾ.1 ಅವರಿಗೆ ಮೃತ ಅಶ್ವಿನಿಯ ಮೊಬೈಲ್ ದೂರವಾಣಿಯಿಂದ ಅವರ ಮಗಳಾದ ಅಶ್ವಿನಿ ಆತ್ಮಹತ್ಯೆ ಮಾಡಿಕೊಂಡಿರುವ ವಿಷಯವನ್ನು ತಿಳಿಸಿರುತ್ತಾರೆ. ಅದರಂತೆಯೇ ಸದರಿ (ಮೃತಳ) ಮೊಬೈಲ್ ದೂರವಾಣಿಯಿಂದಲೇ ಆಪಾದಿತಳಿಗೂ ಮಾಲೀಕರಾದ ಬಸವರಾಜು ಮತ್ತು ಅವನ ಭಾವಮೈದುನ ವಿರೂಪಾಕ್ಷಪ್ಪರೂ ವಿಷಯವನ್ನು ತಿಳಿಸಿರುತ್ತಾರೆ. ವಿಷಯ ತಿಳಿದ ಆಪಾದಿತನು ಬೆಳಿಗ್ಗೆ 11.00 ಗಂಟೆಯ ಸುಮಾರಿಗೆ ಘಟನೆ ನಡೆದ ಸ್ಥಳಕ್ಕೆ ಬಂದಾಗ, ಅಲ್ಲಿ ಅವನ ಅತ್ತೆ–ಮಾವಂದಿರು ಮತ್ತು ಹುಬ್ಬಳ್ಳಿ ಮತ್ತು ಕಲಘಟಗಿಯಲ್ಲಿರುವ ಅವನ ಸಂಬಂಧಿಗಳು ಅದಾಗಲೇ ಘಟನೆಯ

ಸ್ಥಳದಲ್ಲಿ ನೆರೆದಿದ್ದರೂ ಎಂದು ತಿಳಿಸಿರುತ್ತಾನೆ. ಹಾಗೆಯೇ 25.12.2008ರ ರಾತ್ರಿ 9.00 ಗಂಟೆ ಸುಮಾರಿಗೆ ಪ್ರಾ.ಸಾ.1 ಮೃತ ಅಶ್ವಿನಿಗೆ ಅವಳ ಚಿಕ್ಕ ಸಹೋದರಿಯಾದ ವೇದಶ್ರೀ ಯಾರೊಂದಿಗೋ ಊರುಬಿಟ್ಟು ಓಡಿಹೋಗಿದ್ದಾಳೆ ಎಂಬ ಮಾಹಿತಿಯನ್ನು ತಿಳಿಸಿರುತ್ತಾರೆ. ಆಪಾದಿತನ ಹೆಂಡತಿಯೂ ತುಂಬಾ ಸೂಕ್ಷ್ಮ ಸ್ವಭಾವದವಳಾಗಿದ್ದು, ಅವಳ ತಂಗಿ ಯಾರೊಂದಿಗೋ ಓಡಿಹೋದ ವಿಷಯ ತಿಳಿದು ಅವಳು ಬಹಳ ಖಿನ್ನತೆಗೆ ಒಳಗಾದಳು ಆ ವಿಷಯದಿಂದಲೇ ಅವಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಸಹ ಆಪಾದಿತನು ತನ್ನ ಸಾಕ್ಷ್ಯದಲ್ಲಿ ಹೇಳಿಕೆನೀಡಿರುತ್ತಾನೆ. ಆಪಾದಿತನು ತನ್ನ ಹೇಳಿಕೆಯನ್ನು ಮುಂದುವರಿಸಿ, ತಾನು ಘಟನೆಯ ಸ್ಥಳಕ್ಕೆ ಹೋದ ಅರ್ಧ ಗಂಟೆಯ ನಂತರ ಸದರಿ ಸ್ಥಳಕ್ಕೆ ಪೊಲೀಸರು ಬಂದರೆಂದು ತಿಳಿಸುತ್ತಾನೆ. ಆಪಾದಿತನು ತಾನೆಂದು ಸಹಾ ತನ್ನ ಹೆಂಡತಿಯನ್ನು ವರದಕ್ಷಿಣೆಯ ಸಂಬಂಧದಲ್ಲಿ ಹಿಂಸಿಸಿರುವುದಿಲ್ಲ ಮತ್ತು ತನ್ನ ವಿರುದ್ಧ ಹೂಡಲಾದ ವರದಕ್ಷಿಣೆ ಮೊಕದ್ದಮೆಯೂ ಸುಳ್ಳೆಂದು ತಿಳಿಸಿರುತ್ತಾನೆ. ಪಾಟೀ–ಸವಾಲಿನ ಸಂದರ್ಭದಲ್ಲಿ ಪ್ರತಿವಾದಿ ಸಾಕ್ಷಿಯಾದ ಆಪಾದಿತನು 25.12.2008 ರಂದು ತನ್ನ ಮಗನೊಂದಿಗೆ ಕೊಪ್ಪಳಕ್ಕೆ ಹೋದದ್ದು ಸುಳ್ಳು ಸಾಕ್ಷ್ಯವೆಂದು ಪ್ರತಿಪಾದಿಸಿದಾಗ ಪ್ರತಿವಾದಿ ಸಾಕ್ಷಿ 1 ಅದನ್ನು ನಿರಾಕರಿಸಿರುತ್ತಾನೆ. ಪ್ರಾ.ಸಾ.1 25.12.2008 ರಂದು ತನ್ನ ಪತ್ನಿಯೊಂದಿಗೆ ಕಲಘಟಗಿಯಲ್ಲಿರುವ ಸಂಬಂಧಿಕರ ಮನೆಗೆ ಹೋಗಿರುತ್ತಾನೆ. ಅಂದರೆ ಸಂಬಂಧಿಕರಾದ ಅಶೋಕ್ ಅರ್ಕಸಾಲಿ–ಪ್ರಾ.ಸಾ.5 ಮತ್ತು ಕಿಶೋರ್ ಕುಮಾರ್ ಅರ್ಕಸಾಲಿ ಪ್ರಾ.ಸಾ.13 ಇವರ ಮನೆಗೆ ಹೋಗಿರುತ್ತಾರೆ. ಆ ಸಂದರ್ಭದಲ್ಲಿ ಮೃತಳು ಪ್ರಾ.ಸಾ.5 ಮತ್ತು ಪ್ರಾ.ಸಾ.13ರಲ್ಲಿ ವರದಕ್ಷಿಣೆಯ ಸಂಬಂಧದಲ್ಲಿ ಪತಿಯು ನೀಡುತ್ತಿದ್ದ ಹಿಂಸೆಯ ಬಗ್ಗೆ ಅವರಲ್ಲಿ ಹೇಳಿದಾಗ ಅವರು ಪ್ರಾ.ಸಾ.1 ಆಗಿರುವ ಆಪಾದಿತನಿಗೆ ಹಾಗೆ ಮಾಡಬಾರದೆಂದು ಎಚ್ಚರಿಕೆಯ ಬುದ್ಧಿಮಾತನ್ನು ಹೇಳಿರುತ್ತಾರೆ ಎಂಬ ವಿಷಯವನ್ನ ಪ್ರಾಸಿಕ್ಯೂಷನ್ ಅವರು ಪಾಟೀ–ಸವಾಲಿನಲ್ಲಿ ಪ್ರತಿವಾದಿ ಸಾಕ್ಷಿಗೆ ಪ್ರತಿಪಾದಿಸಿದಾಗ ಅದನ್ನು ಸಹ ಪ್ರತಿವಾದಿ ಸಾಕ್ಷಿ.1 ನಿರಾಕರಿಸಿರುತ್ತಾನೆ. ಇದನ್ನು ಪ್ರಾಸಿಕ್ಯೂಷನ್ ಅವರು ತುಂಬಾ ಗಂಭೀರವಾಗಿ ಆಕ್ಷೇಪಿಸಿ, ಆಪಾದಿತನು ಘಟನೆ ನಡೆದ ರಾತ್ರಿ ಕೊಪ್ಪಳಕ್ಕೆ ಹೋಗಿರಲಿಲ್ಲವೆಂದು ಆ ರಾತ್ರಿ ಅವನು ಘಟನೆ ನಡೆದ ಸ್ಥಳದಲ್ಲಿಯೇ

ಇದ್ದಾನೆಂದು ಪ್ರತಿಪಾದಿಸಿ ತಮ್ಮ ವಾದದಲ್ಲಿ ಅವರು ಹೀಗೆ, ವಾದಾಂಶವನ್ನು ಮುಂದಿಟ್ಟಿರುತ್ತಾರೆ. ಘಟನೆ ನಡೆದ ರಾತ್ರಿ ಆಪಾದಿತ ಕೊಪ್ಪಳದಲ್ಲಿದ್ದ ಎಂಬುದನ್ನು ತೋರಿಸಲು ಸ್ವೀಕರಿಸಬಹುದಾದ ವಸ್ತುವಿಷಯುವನ್ನು ನ್ಯಾಯಾಲಯುಕ್ಕೆ ಮಂಡಿಸಬೇಕಿತ್ತು. ಈ ಸಂಬಂಧದಲ್ಲಿ ಆಪಾದಿತನು ತನ್ನ ಮಗನೊಂದಿಗೆ 25.12.2008 ರಂದು ಕೊಪ್ಪಳಕ್ಕೆ ಹೋದ ವಿಷಯ ನಮ್ಮ ಮೌಖಿಕ ಸಾಕ್ಷ್ಯದಲ್ಲಿ ಮಾತ್ರವೇ ನಿರೂಪಿಸಿರುತ್ತಾನೆಯೇ ಹೊರತು ಕೊಪ್ಪಳಕ್ಕೆ ಹೋಗಿರುವ ಬಗ್ಗೆ ರುಜುವಾತುಪಡಿಸುವ ಯಾವುದೇ ಭೌತಿಕ ಸಾಕ್ಷ್ಯಗಳನ್ನು ನೀಡಿರುವುದಿಲ್ಲ ಎಂದು ಪ್ರಾಸಿಕ್ಯೂಷನ್ ಅವರು ತನ್ನ ವಾದಾಂಶದಲ್ಲಿ ಪ್ರಶ್ನಿಸಿರುತ್ತಾರೆ. ಆಪಾದಿತನು ಕೊಪ್ಪಳಕ್ಕೆ ಬಸ್ಸಿನಲ್ಲಿ ಅಥವಾ ರೈಲಿನಲ್ಲಿ ಅಥವಾ ಯಾವುದೇ ಇತರ ವಾಹನದಲ್ಲಿ ಪ್ರಯಾಣಿಸಿರುವ ಬಗ್ಗೆ ಸ್ಪಷ್ಟವಾಗಿ ಹೇಳಿರುವುದಿಲ್ಲ ಹಾಗೇನಾದರೂ ಬಸ್ಸು ಅಥವಾ ರೈಲು ಅಥವಾ ಇತರ ವಾಹನದಲ್ಲಿ ಪ್ರಯಾಣಿಸಿದ್ದರೇ ಕೊನೆಪಕ್ಷ ಪ್ರಯಾಣದ ಸಂದರ್ಭದಲ್ಲಿ ಪಡೆದ ಟಿಕೇಟುಗಳನ್ನು ಹಾಜರುಪಡಿಸಬೇಕಿತ್ತು ಆದರೆ ಅದಾವುದನ್ನು ಆಪಾದಿತನು ಹಾಜರುಪಡಿಸಿರುವುದಿಲ್ಲ. ಹಾಗೆಯೇ ಪ್ರತಿವಾದಿ ಸಾಕ್ಷಿ ಆಗಿರುವ ಆಪಾದಿತನು ಮೌಖಿಕ ಸಾಕ್ಷ್ಯ ನೀಡುವಾಗ ತನ್ನ ಹೆಂಡತಿಯ ಹತ್ತಿರ ಮೊಬೈಲ್ ದೂರವಾಣಿ ಇತ್ತೆಂದು, ಅದೇ ಮೊಬೈಲ್ ದೂರವಾಣಿಯಿಂದಲೇ ಅವನ ಮನೆಯ ಮಾಲೀಕರಾದ ಬಸವರಾಜು ಮತ್ತು ಅವನ ಭಾವಮೈದುನ ವಿರೂಪಾಕ್ಷಪ್ಪ 26.12.2008ರ ಬೆಳಿಗ್ಗೆ ಸುಮಾರು 6.00 ರಿಂದ 6.30 ಗಂಟೆಯಲ್ಲಿ ಅಶ್ವಿನಿ ಆತ್ಮಹತ್ಯೆ ಮಾಡಿಕೊಂಡಿರುವ ವಿಷಯವನ್ನು ತನಗೆ ತಿಳಿಸಿರುತ್ತಾರೆ ಎಂದು ಹೇಳಿಕೆ ನೀಡಿರುತ್ತಾನೆ. ಅದರಂತೆ ಆಪಾದಿತನು ತನ್ನ ಪ್ರತಿವಾದವನ್ನು ಸಮರ್ಥಿಸುವುದಕ್ಕೆ ಮೊಬೈಲ್ ದೂರವಾಣಿಯ ಕರೆ ವಿವರಗಳನ್ನು ಹಾಜರುಪಡಿಸಬೇಕಿತ್ತು ಆದರೆ ಆಪಾದಿತನು ಕರೆ ವಿವರಗಳನ್ನು ಸಹ ಹಾಜರುಪಡಿಸಿರುವುದಿಲ್ಲ. ಆಪಾದಿತನು ಹಾಗೇನಾದರೂ ಕರೆ ವಿವರಗಳನ್ನು ಹಾಜರುಪಡಿಸಿದ್ದರೆ ಕರೆ ಮಾಡಿದ ಸಂದರ್ಭದಲ್ಲಿ ಆಪಾದಿತನು ಯಾವ ಸ್ಥಳದಲ್ಲಿ ಇದ್ದ ಎಂಬ ವಿಷಯವನ್ನು ಮನವರಿಕೆ ಮಾಡಿಕೊಳ್ಳಲು ಪೊಲೀಸರಿಗೆ ಹಾಗೆಯೇ ನ್ಯಾಯಾಲಯಕ್ಕೂ ತಿಳಿದುಕೊಳ್ಳಲು ಸಾಧ್ಯವಾಗುತ್ತಿತ್ತು. ಅಲ್ಲದೇ ಆಪಾದಿತನು ತನ್ನ ಪ್ರತಿವಾದವನ್ನು ರುಜುವಾತುಪಡಿಸಲು

ತನ್ನ ಮನೆಯ ಮಾಲೀಕರಾದ ಬಸವರಾಜು ಮತ್ತು ತನ್ನ ಭಾವಮೈದುನನಾದ ವಿರೂಪಾಕ್ಷಪ್ಪ ಅವರನ್ನು ವಿಚಾರಣೆಗೆ ಗುರಿಪಡಿಸಬೇಕಾಗಿತ್ತು ಆದರೆ ಆಪಾದಿತನು ಅದನ್ನು ಸಹ ಮಾಡಿರುವುದಿಲ್ಲ ಎಂದು ಪ್ರಾಸಿಕ್ಯೂಷನ್ ಅವರು ತಮ್ಮ ವಾದಾಂಶದಲ್ಲಿ ಮೇಲಿನ ಸದರಿ ಆಕ್ಷೇಪಣೆಗಳನ್ನು ಪ್ರತಿಪಾದಿಸಿರುತ್ತಾರೆ. ಪ್ರಾಸಿಕ್ಯೂಷನ್ ಅವರು ತನ್ನ ಆಕ್ಷೇಪಣೆಗಳಿಗೆ ಪೂರಕವಾಗಿ ಸಾಕ್ಷ್ಯಗಳನ್ನು ಹೀಗೆ ನಿರೂಪಿಸಿರುವರು. ಪ್ರಾ.ಸಾ.5 ಮತ್ತು 13 ಇವರ ಮೌಖಿಕ ಸಾಕ್ಷ್ಯದ ಪ್ರಕಾರ ಆಪಾದಿತನು 25.12.2008 ರಂದು ತನ್ನ ಪತ್ನಿಯೊಂದಿಗೆ ಕಲಘಟಗಿ ಬಂದಿರುತ್ತಾನೆ ಮತ್ತು ಆ ಸಮಯದಲ್ಲಿ ಪ್ರಾ.ಸಾ.5 ಮತ್ತು 13 ಇವರ ಸಮ್ಮುಖದಲ್ಲಿ ಆಪಾದಿತನ ಪತ್ನಿ ವರದಕ್ಷಿಣೆಯ ವಿಚಾರವಾಗಿ ತನ್ನ ಗಂಡ ನೀಡುತ್ತಿದ್ದ ಹಿಂಸೆಯನ್ನು ಅವರಲ್ಲಿ ಹೇಳಿಕೊಂಡಾಗ ಪ್ರಾ.ಸಾ.5 ಮತ್ತು 13 ಇವರು ಮೃತಳ ಪತಿಯಾದ ಆಪಾದಿತನು ಹಿಂಸೆ ನೀಡಬಾರದೆಂದು ನೀನು ಮಾಡುತ್ತಿರುವುದು ಸರಿಯಲ್ಲ ಎಂದು ಆಪಾದಿತನಿಗೆ ಬುದ್ಧಿಮಾತು ಹೇಳಿದ ವಿಷಯವನ್ನು ಮೌಖಿಕ ಸಾಕ್ಷ್ಯದಲ್ಲಿ ಹೇಳಿಕೆಯಾಗಿ ನೀಡಿರುತ್ತಾರೆ. ಆಪಾದಿತ ತನ್ನ ಹೆಂಡತಿಯೊಂದಿಗೆ ಅದೇ ದಿನ ಹಿಂದುರುಗಿದ ಎಂದು ಸಹ ಪ್ರಾ.ಸಾ.5 ಮತ್ತು 13 ಅವರು ಹೇಳಿಕೆ ನೀಡಿರುತ್ತಾರೆ. ಪ್ರಾ.ಸಾ.5 ಮತ್ತು 13 ಅವರನ್ನು ಪಾಟೀ–ಸವಾಲಿಗೆ ಒಳಪಡಿಸಿದಾಗ ಆಪಾದಿತ ತನ್ನ ಪತ್ನಿಯೊಂದಿಗೆ 25.12.2008 ರಂದು ಕಲಘಟಗಿಗೆ ಬಂದ ವಿಷಯದ ಬಗ್ಗೆ ಸಾಕಷ್ಟು ಪ್ರಶ್ನೆಯನ್ನು ಕೇಳಿದಾಗಲು ಅವರಿಬ್ಬರೂ ತಮ್ಮ ಹೇಳಿಕೆಗೆ ಬದ್ಧವಾಗಿಯೇ ಸಾಕ್ಷ್ಯವನ್ನು ನೀಡಿರುತ್ತಾರೆಯೇ ಹೊರತು ತಮ್ಮ ಹೇಳಿಕೆಯನ್ನು ಎಲ್ಲೂ ಅಲ್ಲಗೆಳೆದಿರುವುದು ಕಂಡುಬರುವುದಿಲ್ಲ. ಅಪೀಲುದಾರ/ಆಪಾದಿತನು ನೀಡಿದ ಮೌಖಿಕ ಸಾಕ್ಷ್ಯವನ್ನು ಈ ಸಂದರ್ಭದಲ್ಲಿ ಅವಲೋಕಿಸಿದಾಗ, 26.12.2008ರ ಬೆಳಿಗ್ಗೆ ಸುಮಾರು 6.00 ರಿಂದ 6.30 ಗಂಟೆಯಲ್ಲಿ ಆಪಾದಿತನ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಿರುವ ವಿಷಯವನ್ನು ಆಪಾದಿತನಿಗೆ ಬಸವರಾಜು ಮತ್ತು ವಿರೂಪಾಕ್ಷಪ್ಪ ಅವರು ಆಪಾದಿತನ ಹೆಂಡತಿಯಾದ ಮೃತ ಅಶ್ವಿನಿಯ ಮೊಬೈಲ್ ದೂರವಾಣಿಯ ಮೂಲಕ ಅವನಿಗೆ ವಿಷಯವನ್ನು ತಿಳಿಸಿರುತ್ತಾರೆ ಎಂಬ ವಿಷಯವನ್ನು ರುಜುವಾತು ಪಡಿಸುವ ಸಂಬಂಧದಲ್ಲಿ ಆಪಾದಿತನು ಆ ಯಾವುದೇ ದಸ್ತಾವೇಜುಗಳನ್ನು

ಹಾಜರುಪಡಿಸಿರುವುದಿಲ್ಲ ಎಂಬುದು ಕಂಡುಬರುತ್ತದೆ. ಪ್ರಾ.ಸಾ.14 ಶ್ರೀಮತಿ ಮಹಾದೇವಿ ಯಡವಟ್ಟಿಯವರ ಮೌಖಿಕ ಸಾಕ್ಷ್ಯವನ್ನು ಪರ್ಯಾಲೋಚಿಸಿದಾಗ ಪ್ರಾ.ಸಾ.14 ಅವರು ಆಪಾದಿತ ಮತ್ತು ಮೃತಳ ಮನೆಯ ಮಾಲೀಕಳಾಗಿರುತ್ತಾರೆ. 2008ರಲ್ಲಿ ಪ್ರಾ.ಸಾ.14ನ್ನು ಮುಖ್ಯ ವಿಚಾರಣೆಗೆ ಗುರಿಪಡಿಸಿದಾಗ ಅವರು ನೀಡಿದ ಹೇಳಿಕೆ ಹೀಗಿದೆ, ಆಪಾದಿತನು ತನ್ನ ಹೆಂಡತಿ ಮತ್ತು ಸಣ್ಣ ಮಗುವಿನೊಂದಿಗೆ ತಮ್ಮ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುತ್ತಾರೆ. ದಿನಾಂಕ 25.12.2008ರಂದು ಆಪಾದಿತನ ಮನೆಯಲ್ಲಿ ಇಡೀ ದಿನ ಇರುವುದಿಲ್ಲ. ಆದರೆ ಆ ದಿನದ ರಾತ್ರಿ 9 ಗಂಟೆ ಅಥವಾ 9.30ಗಂಟೆ ಸುಮಾರಿಗೆ ಆಪಾದಿತ ತನ್ನ ಪತ್ನಿ ಮತ್ತು ಸಣ್ಣ ಮಗುವಿನೊಂದಿಗೆ ಮನೆಗೆ ಹಿಂದಿರುಗಿರುತ್ತಾನೆ. ಆ ಸಂದರ್ಭದಲ್ಲಿ ತಾನು ದೂರದರ್ಶನದಲ್ಲಿ ಕಾರ್ಯಕ್ರಮವನ್ನು ವೀಕ್ಷಿಸುತ್ತಿದ್ದೆ. ಆಪಾದಿತ ನನ್ನ ಮನೆಯೊಳಗೆ ಬಂದು ನಂತರದಲ್ಲಿ ಅವನು ತನ್ನ ಮನೆಗೆ ಹೋದದ್ದನ್ನು ನಾನು ಗಮನಿಸಿದೆ ಹಾಗೂ ತದನಂತರದಲ್ಲಿ ಆ ರಾತ್ರಿ ಆ ಮನೆಯಲ್ಲಿ ಏನಾಯಿತೆಂದು ಗೊತ್ತಿಲ್ಲ, ಬೆಳಿಗ್ಗೆ 8.30 ಗಂಟೆಯಷ್ಟರಲ್ಲಿ ಮೃತ ಅಶ್ವಿನಿಯ ಸಹೋದರಿ ಮನೆಯ ಹತ್ತಿರಬಂದು ಅಶ್ವಿನಿ ಮನೆಯಲ್ಲಿ ಇದ್ದಾಳೆಯೇ ಅಥವಾ ಇಲ್ಲವೇ ಎಂದು ವಿಚಾರಿಸಿದಾಗ ತಾನು ಮೃತಳ ಸಹೋದರಿಗೆ ಮೃತಳ ಮನೆಯನ್ನು ತೋರಿಸಿದೆ ಆದರೆ ಮನೆಗೆ ಹೊರಗಿನಿಂದ ಬೀಗ ಹಾಕಲಾಗಿತ್ತು ಎಂದು ಹೇಳಿಕೆ ನೀಡಿರುತ್ತಾರೆ. ಅದರಂತೆ ಪ್ರಾ.ಸಾ.14 ಅವರನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ಪಾಟೀ–ಸವಾಲಿಗೆ ಗುರಿಪಡಿಸಿದಾಗ, ಅವರಿಂದ ಮತ್ತಷ್ಟು ವಿಷಯವು ಬಹಿರಂಗವಾಯಿತು ಅಂದರೆ, 26.12.2008ರ ಬೆಳಗಿನ ಜಾವ 4.00 ಗಂಟೆ ಸುಮಾರಿಗೆ ಮೃತಳ ಮಗನಾದ ಅಭಿನಂದನ್ ಜೋರಾಗಿ ಅತ್ತ ಶಬ್ದಕ್ಕೆ ನಾನು ಎಚ್ಚರಗೊಂಡೆ, ಆ ಸಮಯದಲ್ಲಿಯೇ ಆಪಾದಿತ ತನ್ನ ಮಗುವಿನೊಂದಿಗೆ ನಮ್ಮ ಮನೆಯ ಮುಂದೆಯೇ ಹಾದುಹೋದದ್ದನ್ನು ನಾನು ನೋಡಿದೆ ಮಗು ಅಳುತ್ತಿದ್ದ ಕಾರಣದಿಂದ ಮಗುವನ್ನು ಸಮಾಧಾನಪಡಿಸಲು ಹೊರಗೆ ಹೋಗುತ್ತಿರಬೇಕೆಂದು ತಿಳಿದುಕೊಂಡೆ ಎಂದು ಪ್ರಾ.ಸಾ.14 ಅವರು ಹೇಳಿಕೆಯನ್ನು ನೀಡಿರುತ್ತಾರೆ. ಪ್ರತಿವಾದಿಗಳು ನಡೆಸಿದ ಪಾಟೀ–ಸವಾಲಿನಲ್ಲಿಯೂ ಮನೆ ಮಾಲೀಕಳಾದ ಪ್ರಾ.ಸಾ.14 ಸದರಿ ಮನೆಯು ಬೀಗವನ್ನು ಮಗನೊಂದಿಗೆ ಮಾತ್ರ ಬಂದ ಆಪಾದಿತನು

ಬೆಳಿಗ್ಗೆ ತೆರೆದಿರುವ ಅಂಶವನ್ನು ನಿರಾಕರಿಸುತ್ತಾರೆ, ಅಂತೆಯೇ 25.12.2008ರ ರಾತ್ರಿ 9.00 ಅಥವಾ 9.30 ಗಂಟೆಯ ಸುಮಾರಿಗೆ ಆಪಾದಿತ ತನ್ನ ಹೆಂಡತಿ, ಮಗುವಿನೊಂದಿಗೆ ಮನೆಗೆ ಹಿಂದುರುಗಿದಾಗ ಅವರು ಕಲಘಟಗಿಗೆ ಹೋಗಿಬಂದ ವಿಚಾರವನ್ನು ನನ್ನಲ್ಲಿ ಹೇಳಿದರೂ ಎಂದು ನಿರೂಪಿಸಿರುವರು. ಪ್ರತಿವಾದಿ ಪಾಟೀ–ಸವಾಲಿನಲ್ಲಿ ಪ್ರಾ.ಸಾ.14 26.12.2008 ರಂದು ಬೆಳಗಿನ ಜಾವ 4.00 ಗಂಟೆಯಲ್ಲಿ ಆಪಾದಿತ ತನ್ನ ಮಗನೊಂದಿಗೆ ಹೊರಗೆ ಹೊದದ್ದನ್ನು ನೋಡಿರುವುದಿಲ್ಲ ಎಂಬ ಅಂಶವನ್ನು ಆಕೆ ನಿರಾಕರಿಸಿರುತ್ತಾಳೆ ಮತ್ತು ಅವಳು ನೀಡಿದ ಹೇಳಿಕೆ ಸುಳ್ಳಾಗಿದೆ ಎಂದು ಪ್ರತಿವಾದಿಗಳೂ ತಮ್ಮ ವಾದದಲ್ಲಿ ಮಂಡಿಸಿರುವರು.

20. ಪ್ರಾಸಿಕ್ಯೂಷನ್ ಸಾಕ್ಷಿಗಳು ಈಗಾಗಲೇ ನೀಡಿದ ಸಾಕ್ಷ್ಯದಲ್ಲಿ, ಆಪಾದಿತ ಬೆಳಿಗ್ಗೆ 10.30 ಸುಮಾರಿಗೆ ಘಟನೆಯ ಸ್ಥಳಕ್ಕೆಬಂದು ಬೀಗಹಾಕಿದ ತನ್ನ ಮನೆಯ ಬೀಗವನ್ನು ತಾನೇ ತೆರೆದಿರುವುದನ್ನು ಸ್ಪಷ್ಟವಾಗಿ ಕಂಡುಬರುತ್ತದೆ. ಅವನ ಮನೆಯ ಬೀಗದಕೈ ಅವನ ಸ್ವಾಧೀನದಲ್ಲಿಯೇ ಇರುವುದರಲ್ಲಿ ಯಾವುದೇ ಸಂದೇಹವಿರುವುದಿಲ್ಲ. ಈ ಸಂಬಂಧದಲ್ಲಿ ತನಿಖಾಧಿಕಾರಿಯಾದ ವಿಲ್ಸನ್ ಸುಧಾಕರ್ (ಪ್ರಾ.ಸಾ.26) ಅವರನ್ನು ಪಾಟೀ–ಸವಾಲಿಗೆ ಒಳಪಡಿಸಿದಾಗ, ಪ್ರಾ.ಸಾ.1/ದೂರುದಾರ ಮತ್ತು ಪ್ರಾ.ಸಾ.2 ದೂರುದಾರನ ಹೆಂಡತಿ ಸದರಿ ಸಂಗತಿಯ ಕುರಿತು ತಮ್ಮ ಸಮ್ಮುಖದಲ್ಲಿ ಅವರು ಈ ರೀತಿಯ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದು ಸ್ಪಷ್ಟವಾಗಿ ನಿರೂಪಿಸಿರುತ್ತಾರೆ. ಆದುದರಿಂದ ಪ್ರಾ.ಸಾ.ಗಳಾದ 1 ಮತ್ತು 2 ಇವರ ಸಾಕ್ಷ್ಯಗಳನ್ನು ಸಂಬಂಧಪಟ್ಟ ಸದರಿ ಅಂಶಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಮುಂದೆ ಪ್ರಾ.ಸಾ.ಗಳಾದ 1 ಮತ್ತು 2 ಸದರಿ ವಾಸ್ತವಾಂಶಗಳ ಕುರಿತು ಹೇಳಿಕೆ ನೀಡಿರುವಾಗ ತಮ್ಮಿಂದ ಆಗಿರುವ ಕರ್ತವ್ಯಚ್ಯುತಿಯನ್ನು ನಿವೇದಿಸಿರುತ್ತಾರೆ. ವಾಸ್ತವವಾಗಿ ಆಪಾದಿತ ಘಟನೆಯ ಸ್ಥಳಕ್ಕೆ ಬಂದಿರುತ್ತಾನೆ ಮತ್ತು ಘಟನೆ ನಡೆದ ಅವನ ಮನೆಯ ಬೀಗದಕೈಗಳು ಅವನ ಸುಪರ್ದಿಯಲ್ಲಿಯೇ ಇರುತ್ತದೆ ಮತ್ತು ಆಪಾದಿತನು ಸ್ವತಃ ತಾನೇ ತನ್ನ ಮನೆಯ ಬೀಗವನ್ನು ತೆರೆದಿರುವುದು ಮೊಕದ್ದಮೆಯಲ್ಲಿ ಸದುಪಯೋಗಪಡಿಸಿಕೊಂಡ ಅಂಶವಾಗಿ ಕಂಡುಬರುತ್ತದೆ.

21. ಆದರೆ ವಾಸ್ತವವಾಗಿ ಆಪಾದಿತನು ಬೆಳಿಗ್ಗೆ 10.30 ಗಂಟೆಯ ಸುಮಾರಿಗೆ ಘಟನೆ ನಡೆದಿರುವ ಸದರಿ ಮನೆಗೆ ಬಂದಿರುತ್ತಾನೆ ಹಾಗೂ ಅವನು ಸ್ವಾಧೀನದಲ್ಲಿ ಸದರಿ ಮನೆಯ ಬೀಗದಕ್ಕೈ ಇರುತ್ತದೆ. ಆಪಾದಿತನ ಸ್ವತಃ ತಾನೇ ತನ್ನ ಸದರಿ ಮನೆಯ ಬಾಗಿಲನ್ನು ತೆರೆದಿರುವುದು ಪ್ರಾ.ಸಾ.3–ಸೀಮಾ, ಪ್ರಾ.ಸಾ.5–ಅಶೋಕ್ ಅರ್ಕಸಾಲಿ, ಪ್ರಾ.ಸಾ.13–ಕಿಶೋರ್ ಕುಮಾರ್ ಅರ್ಕಸಾಲಿ, ಪ್ರಾ.ಸಾ.14–ಶ್ರೀಮತಿ ಮಹಾದೇವಿ ಯಡವಟ್ಟಿ ಆಪಾದಿತ ಮತ್ತು ಅವನ ಮೃತ ಹೆಂಡತಿ ಬಾಡಿಗೆ ಮನೆಯ ಮಾಲೀಕರು ಮತ್ತು ಪ್ರಾ.ಸಾ.16–ಹೇಮಂತ್ ಕುಮಾರ್ ಮೇಲಿನಮನಿ ಈ ಎಲ್ಲಾ ಐದು ಪ್ರತ್ಯಕ್ಷ್ಯ ಸಾಕ್ಷಿದಾರರು ಅದಕ್ಕೆ ಸಾಕ್ಷಿದಾರರಾಗಿರುತ್ತಾರೆ, ಹಾಗೂ ಅವರೆಲ್ಲರೂ ಸಾಕ್ಷ್ಯದಲ್ಲಿ ಈ ಅಂಶವನ್ನು ಬಲವಾಗಿ ಪ್ರತಿಪಾದಿಸಿರುತ್ತಾರೆ. ಆದರೆ, ತನಿಖಾಧಿಕಾರಿಯೂ ಈ ಐದು ಸಾಕ್ಷಿದಾರರನ್ನು ವಿಚಾರಣೆಮಾಡಿರುವುದಿಲ್ಲ, ಅವರಿಂದ ಮಾಹಿತಿಯನ್ನು ಪಡೆಯದೇ ಕರ್ತವ್ಯಲೋಪ ಎಸಗಿರುವುದು ಕಂಡುಬರುತ್ತದೆ. ಆದುದರಿಂದ ಸದರಿ ಸಂಗತಿಯ ಸಂಬಂಧದಲ್ಲಿ ಈ ಎಲ್ಲಾ ಐದು ಸಾಕ್ಷಿದಾರರ ಸಾಕ್ಷ್ಯಗಳನ್ನು ಆಕ್ಷೇಪಿಸದೇ ಹಾಗೇ ಉಳಿದಿರುತ್ತದೆ. ತನಿಖಾಧಿಕಾರಿ ಈ ಐದು ಸಾಕ್ಷಿದಾರರನ್ನು ಸದರಿ ಸಂಗತಿಯ ಭಾಗವಾಗಿ ನೇರವಾಗಿ ವಿಚಾರಣೆಮಾಡದ ಹೊರತು ಮತ್ತು ವಿಚಾರಣೆ ಮಾಡುವವರೆಗೆ, ಪ್ರತಿವಾದಿಗಳು ಎತ್ತಿರುವ ಕರ್ತವ್ಯಲೋಪವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಆದುದರಿಂದ, ಅಭಿಲೇಖದ ಮೇಲೆ ಮಂಡಿಸಿದ ಎಲ್ಲಾ ವಿಷಯವಸ್ತುಗಳನ್ನು ಪರಿಗಣನೆಗೆ ತೆಗೆದುಕೊಂಡಾಗ, ಅವುಗಳೆಲ್ಲವು 25/26.12.2008ರ ರಾತ್ರಿ ಹಾಗೂ ಬೆಳಗಿನ ಜಾವ ಅವಧಿಯಲ್ಲಿ ಆಪಾದಿತನು ತನ್ನ ಮನೆಯಲ್ಲಿ ಉಪಸ್ಥಿತವಿರುವುದನ್ನು ಸ್ಪಷ್ಟವಾಗಿ ನಿರೂಪಿಸಿ ತೋರಿಸುತ್ತವೆ ಮತ್ತು ಅದು ಆಪಾದಿತನು ತಪ್ಪಾದ ಪ್ರತಿವಾದ ಮಾಡಿರುವುದನ್ನು ಅಂದರೆ ತಾನು ಕೊಪ್ಪಳದಲ್ಲಿ ಇದ್ದೆ ಎಂಬುದನ್ನು ಸುಳ್ಳೆಂದು ನಿರೂಪಿಸಿ ತೋರಿಸುತ್ತದೆ ಮತ್ತು ಘಟನೆ ನಡೆದ ರಾತ್ರಿ ಆಪಾದಿತನು ಸದರಿ ಮನೆಯಲ್ಲಿ ಇರಲಿಲ್ಲ ಎಂಬುದು ಸುಳ್ಳಾಗಿದೆ ಎಂಬುದನ್ನು ತೋರಿಸುತ್ತದೆ. ಆಪಾದಿತನು ಪ್ರತಿವಾದದಲ್ಲಿ ಮಂಡಿಸಿದ ಘಟನೆ ನಡೆದ ರಾತ್ರಿ ತಾನು ಕೊಪ್ಪಳದಲ್ಲಿದ್ದ ಎಂಬುದನ್ನು ಸಾಬೀತು ಪಡಿಸಲು ವಿಫಲವಾಗಿದ್ದಾನೆ.

22. ಪ್ರಾ.ಸಾ.5–ಅಶೋಕ್ ಅರ್ಕಸಾಲಿ ಮತ್ತು ಪ್ರಾ.ಸಾ.13–ಕಿಶೋರ ಕುಮಾರ್ ಅರ್ಕಸಾಲಿ ಇವರ ಸಾಕ್ಷ್ಯಗಳು ಆಪಾದಿತನು 25.12.2008 ರಂದು ಕಲಘಟಗಿಗೆ ತನ್ನ ಪತ್ನಿ ಹಾಗೂ ಮಗುವಿನೊಂದಿಗೆ ಬಂದಿದ್ದಾನೆಂದು ಮತ್ತು ಮೃತ ಅಶ್ವಿನಿ ಆಪಾದಿತನ ವಿರುದ್ಧ ವರದಕ್ಷಿಣೆಯ ಬಾಕಿ ಹಣವನ್ನು ತರುವಂತೆ ತನಗೆ ಹಿಂಸೆ ನೀಡುತ್ತಿದ್ದಾನೆಂದು ಪ್ರಾ.ಸಾ.5 ಮತ್ತು 13ರಲ್ಲಿ ದೂರನ್ನು ಹೇಳಿದಾಗ ಪ್ರಾ.ಸಾ.ಗಳಾದ 5 ಮತ್ತು 13 ಆಪಾದಿತನಿಗೆ ಹಾಗೇ ಮಾಡಬಾರದೆಂದು ಅವನಿಗೆ ಬುದ್ಧಿಮಾತು ಹೇಳಿರುತ್ತಾರೆ. ತದನಂತರದಲ್ಲಿ ಆಪಾದಿತನು ತನ್ನ ಪತ್ನಿ ಹಾಗೂ ಮಗುವಿನೊಂದಿಗೆ ಧಾರವಾಡ ಗುಲಗಂಜಿ ಕೊಪ್ಪದಲ್ಲಿರುವ ಸದರಿ ಬಾಡಿಗೆ ಮನೆಗೆ ಹಿಂದಿರುಗಿರುತ್ತಾನೆ.

23. ಪ್ರಾ.ಸಾ.26 ಆಗಿರುವ ತನಿಖಾಧಿಕಾರಿಯ ಸಾಕ್ಷ್ಯವನ್ನು ಅವಲೋಕಿಸಿದಾಗ ಮತ್ತು ಪ್ರಾ.ಸಾ.5 ಮತ್ತು 13 ಅವರ ಪಾಟೀ–ಸವಾಲಿನ ಸಾಕ್ಷ್ಯವನ್ನು ಗಮನಿಸಿದಾಗ ತನಿಖೆಯ ಅವಧಿಯಲ್ಲಿ ಪೊಲೀಸರ ಮುಂದೆ ಆಪಾದಿತನು ಕಲಘಟಗಿಗೆ ಬಂದಿದ್ದ ಸಂಗತಿಯನ್ನು ಮತ್ತು ಮೃತಳು ಆಪಾದಿತನ ವಿರುದ್ಧ ಅವರ ಮುಂದೆ ಹೇಳಿದ ದೂರು ಹಾಗೂ ಆಪಾದಿತನಿಗೆ ಪ್ರಾ.ಸಾ.ಗಳಾದ 5 ಮತ್ತು 13 ಅವರು ಹೇಳಿದ ಬುದ್ಧಿಮಾತಿನ ಬಗ್ಗೆ ಹೇಳಿಕೆ ನೀಡದಿರುವುದನ್ನು ಅವರು ಒಪ್ಪಿಕೊಂಡಿರುವುದು ಸತ್ಯವಾದುದಾಗಿದೆ. ಆದರೆ, ಪ್ರಾ.ಸಾ.14 (ಮನೆ ಮಾಲೀಕಳು) ನೀಡಿದ ಸಾಕ್ಷ್ಯವು, ಅಂದರೆ 25.12.2008 ಇಡೀ ದಿನ ಆಪಾದಿತನ ಮನೆಯಲ್ಲಿ ಯಾರು ಇರುವುದಿಲ್ಲ. ಆಪಾದಿತನು ತನ್ನ ಹೆಂಡತಿ, ಮಗನೊಂದಿಗೆ 25.12.2008ರ ರಾತ್ರಿ ಸುಮಾರು 9.00 ಅಥವಾ 9.30 ಗಂಟೆಗೆ ಮನೆಗೆ ಹಿಂದಿರುಗಿರುತ್ತಾನೆ ಎಂಬ ಅಂಶವು ಸ್ಪಷ್ಟವಾಗಿ ನಿರೂಪಿಸುತ್ತದೆ. ಮನೆಯ ಮಾಲೀಕಿ ನೀಡಿದ ಸಾಕ್ಷ್ಯದಲ್ಲಿ 26.12.2008ರ ಬೆಳಗಿನ ಜಾವ ಸುಮಾರು 3.00 ಗಂಟೆಯಲ್ಲಿ ಮಗು ಅಳುತ್ತಿರುವ ಶಬ್ದ ಕೇಳಿಸಿಕೊಂಡಿದ್ದ ಮತ್ತು ಬೆಳಗ್ಗೆ 4.00 ಗಂಟೆಯ ಸುಮಾರಿಗೆ ಆಪಾದಿತನು ತನ್ನ ಮಗುವಿನೊಂದಿಗೆ ಮನೆಯಿಂದ ಹೊರಹೋಗಿದ್ದನ್ನು ನೋಡಿರುವ ವಿಷಯದಿಂದ ಸಂಗತಿಯೂ ಮತ್ತಷ್ಟು ಸ್ಪಷ್ಟವಾಗುತ್ತದೆ. ಅಳುತ್ತಿರುವ ಮಗುವನ್ನು ಸಮಾಧಾನಪಡಿಸಲು ಆಪಾದಿತನು ಮನೆಯಿಂದ ಹೊರಹೋಗಿರಬೇಕೆಂದು ಅವಳು

ಭಾವಿಸಿಕೊಂಡ ವಿಷಯವನ್ನು ಹೇಳಿಕೆಯಲ್ಲಿ ದಾಖಲಿಸಿರುತ್ತಾಳೆ. ಹಾಗಾಗಿ ಮನೆ ಮಾಲೀಕಳ ಸಾಕ್ಷವು, ಮನೆಯ ನೆರೆಹೊರೆಯಾಗಿರುವ ಆಕೆಯ ಸಾಕ್ಷ್ಯವು ಮತ್ತು ಆಪಾದಿತನ ಮನೆಯಲ್ಲಿ ಏನು ನಡೆದಿದೆ ಎಂಬುದನ್ನು ತಿಳಿದುಕೊಳ್ಳಲು ಅವಕಾಶ ಇರುವ ಅವಳ ಸಾಕ್ಷ್ಯವು ಆಕ್ಷೇಪಣೆಗೊಳಗಾಗದೇ ಹಾಗೆಯೇ ಉಳಿದಿದೆ. ಪಾಟೀ–ಸವಾಲಿನ ಸಂದರ್ಭದಲ್ಲಿ ಅವಳು ತನ್ನ ಹೇಳಿಕೆಗಳಿಗೆ ಬದ್ಧವಾಗಿಯೇ ಸಾಕ್ಷ್ಯ ನುಡಿದಿರುವುದು ಅವಳ ಸಾಕ್ಷ್ಯದಲ್ಲಿ ಯಾವುದೇ ಅಪನಂಬಿಕೆಯೂ ಕಂಡುಬರುವುದಿಲ್ಲ. ಆದುದರಿಂದ, ಈ ಎಲ್ಲಾ ವಸ್ತುವಿಷಯಗಳು ಆಪಾದಿತನು ದಿನಾಂಕ:25.12.2008 ರಂದು ತನ್ನ ಪತ್ನಿ ಹಾಗೂ ಮಗನೊಂದಿಗೆ ಮನೆಗೆ ಹಿಂದಿರುಗಿರುವುದು ಮತ್ತು ಆ ರಾತ್ರಿ ಆಪಾದಿತನು ಮನೆಯಲ್ಲಿಯೇ ಇದ್ದನೆಂಬುದು ರುಜುವಾತುಪಡಿಸುತ್ತವೆ.

24. ದೂರುದಾರರ ದೃಢೋಕ್ತಿಗಳಲ್ಲಿ, ಪ್ರಾ.ಸಾ.ಗಳಾದ 1 ರಿಂದ 5 ಮತ್ತು 13, ಮೃತಳ ಸಂಬಂಧಿಕರಗಳ ಮೌಖಿಕ ಸಾಕ್ಷ್ಯದಲ್ಲಿ, ಆಪಾದಿತನು ವರದಕ್ಷಿಣೆಯ ಸಂಬಂಧದಲ್ಲಿ ಮತ್ತುಷ್ಟು ಹಣ ತರಬೇಕೆಂದು ತವರುಮನೆಗೆ ಹೋಗಿ ಹಣ ತರಬೇಕೆಂದು ಮೃತಳಿಗೆ ಸಾಕಷ್ಟು ಚಿತ್ರಹಿಂಸೆ ನೀಡಿರುವ ಬಗೆಯೂ ಕಂಡುಬರುತ್ತದೆ. ಪ್ರಾ.ಸಾ.ಗಳಾದ 1 ಮತ್ತು 2 ಮೃತಳಾದ ಅಶ್ವಿನಿಯ ತಂದೆ–ತಾಯಿಗಳಾಗಿರುವರು, ಅವರು ತಮ್ಮ ಸಾಕ್ಷ್ಯದಲ್ಲಿ ತಮ್ಮ ಮಗಳು ತಮಗೆ ದೂರವಾಣಿಯ ಮೂಲಕ ಕರೆಮಾಡಿ ಅವಳ ಗಂಡ/ಆಪಾದಿತನು ಹಣ ತೆಗೆದುಕೊಂಡು ಬಾ ಎಂದು ಹಿಂಸೆ ಮತ್ತು ಕಿರುಕುಳ ನೀಡುತ್ತಿರುವ ವಿಷಯವನ್ನು ತಿಳಿಸಿರುವುದು ನಿರ್ದಿಷ್ಟವಾಗಿ ಹೇಳಿಕೆಯಲ್ಲಿ ನಿರೂಪಿಸಿರುತ್ತಾರೆ. ಪ್ರಾ.ಸಾ.ಗಳಾದ 5 ಮತ್ತು 13 ಸಹ ಈ ಅಂಶವನ್ನು ಹೇಳಿಕೆಯಲ್ಲಿ, ಮೃತ ಅಶ್ವಿನಿ ತನ್ನ ಗಂಡ ಹಣ ತೆಗೆದುಕೊಂಡು ಬಾ ಎಂದು ನೀಡುತ್ತಿದ್ದ ಹಿಂಸೆ ಮತ್ತು ಕಿರುಕುಳವನ್ನು ಅವರ ಮುಂದೆ ಗಂಡ ವಿರುದ್ಧ ದೂರನ್ನು ಹೇಳಿರುವುದು ತಮ್ಮ ಹೇಳಿಕೆಯಲ್ಲಿ ಅದನ್ನು ನಿರೂಪಿಸಿರುತ್ತಾರೆ. ಇದು ಸತ್ಯ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ, ಮೇಲೆ ಈಗಾಗಲೇ ಚರ್ಚಿಸಿದಂತೆ, ಪ್ರಾ.ಸಾ.ಗಳಾದ 5 ಮತ್ತು 13ರ ಸಾಕ್ಷ್ಯದಲ್ಲಿ ಸದರಿ ಸಂಗತಿಯ ಸಂಬಂಧದಲ್ಲಿ ಕರ್ತವ್ಯಚ್ಯುತಿ ಕಂಡುಬಂದಿದ್ದರೂ, 25.12.2008 ರಂದು ಕಲಘಟಗಿಯ

ಪ್ರಾ.ಸಾ.5 ಮತ್ತು 13 ಇವರ ಮನೆಗೆ ಮೃತಳು ಮತ್ತು ಅವಳ ಗಂಡನು ಹೋಗಿರುವುದು ಸತ್ಯವಾಗಿರುವುದನ್ನು ಮತ್ತು ಮೊಕದ್ದಮೆಯಲ್ಲಿ ಇತರ ಗಮನೀಯ ಸಂದರ್ಭಗಳೊಂದಿಗೆ ಪರಿಗಣಿಸಬೇಕಾಗುತ್ತದೆ ಮತ್ತು ವಿವೇಚಿಸಬೇಕಾಗುತ್ತದೆ.

25. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳು ತಮ್ಮ ವಾದಾಂಶದಲ್ಲಿ, ಪ್ರಾಸಿಕ್ಯೂಷನ್ ಸಾಕ್ಷಿದಾರರೆಲ್ಲರು, ಮೃತಳಿಗೆ ಸಂಬಂಧಿಕರುಗಳೇ ಆಗಿರುತ್ತಾರೆ ಎಂಬ ಅಂಶವನ್ನು ಎತ್ತಿರುವರು ಮತ್ತು ಆದುದರಿಂದಲೇ ಅವರೆಲ್ಲರೂ ಮೃತಳ ಪರವಾಗಿ ಸಾಕ್ಷಿದಾರರಾಗಿರುವುದರಿಂದ ನ್ಯಾಯಾಲಯವು ಅವರ ಸಾಕ್ಷ್ಯವನ್ನು ಆಧಾರವಾಗಿಟ್ಟುಕೊಳ್ಳಬಾರದೆಂದು ಮಂಡಿಸುತ್ತಾರೆ. ಈ ಸಂಬಂಧದಲ್ಲಿ ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಸರ್ವೋಚ್ಚ ನ್ಯಾಯಾಲಯದ ಕೆಲವೊಂದು ನಿರ್ಣಯಗಳನ್ನು ಸಹ ನಿದರ್ಶನ ಪೂರ್ವಕವಾಗಿ ಮಂಡಿಸಿರುವರು, ಸರ್ವೋಚ್ಚ ನ್ಯಾಯಾಲಯದ ***ಪಂಜಾಬ್ ರಾಜ್ಯ –ವಿರುದ್ಧ– ಜಿತ್ ಸಿಂಗ್ ಮತ್ತು ಇತರರು***[5] ಮೊಕದ್ದಮೆಯಲ್ಲಿನ ನಿರ್ಣಯ ಹಾಗೂ ಮುಖ್ಯ ಟಿಪ್ಪಣಿ 'ಸಿ' ಯಲ್ಲಿ ವರದಿಯಾಗಿರುವ ***ಆಂಧ್ರಪ್ರದೇಶ ರಾಜ್ಯ –ವಿರುದ್ಧ– ಪುಜತಿ ರಾಮುಲು***[6] ಮೊಕದ್ದಮೆಯಲ್ಲಿನ ನಿರ್ಣಯವನ್ನು ಅವಲಂಬನೆಯಾಗಿ ನೀಡಿರುವರು. ನಾವು ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪರ್ಯಾಲೋಚಿಸಿದ್ದೇವೆ. ಆದರೆ, ಈ ಸದರಿ ಮೊಕದ್ದಮೆಯೂ ಮತ್ತೊಂದು ಬಗೆಯದಾಗಿದೆ. ಪ್ರಾಸಿಕ್ಯೂಷನ್ ಅವರು ಮೃತಳ ಸಂಬಂಧಿಕರ ಸಾಕ್ಷ್ಯವನ್ನು ಮಾತ್ರವೇ ಆಧಾರವಾಗಿ ತೆಗೆದುಕೊಂಡಿರುವುದಿಲ್ಲ. ಪ್ರಾಸಿಕ್ಯೂಷನ್ ಅವರು ಆಪಾದಿತನ ಮನೆಯ ಮಾಲೀಕಳಾದ ಪ್ರಾ.ಸಾ.14 ಶ್ರೀಮತಿ ಮಹಾದೇವಿ ಯಡವಟ್ಟಿಯವರನ್ನು ವಿಚಾರಣೆಗೆ ಗುರಿಪಡಿಸಿರುತ್ತಾರೆ. ಸದರಿ ಪ್ರಾ.ಸಾ.14 ಸ್ವತಂತ್ರ ಸಾಕ್ಷಿದಾರರಾಗಿರುತ್ತಾರೆ ಮತ್ತು ಆಕೆ ಮೃತಳ ಸಂಬಂಧಿಕಳು ಆಗಿರುವುದಿಲ್ಲ. ಮೃತಳು ಮತ್ತು ಅಪೀಲುದಾರ ವಾಸವಿದ್ದ ಮನೆಯು ಪ್ರಾ.ಸಾ.14 ಮತ್ತು ಅವಳ ಗಂಡನಿಗೆ ಸೇರಿದ

5. 1995 ಎಸ್‌ಸಿಸಿ(ಕ್ರಿಮಿನಲ್) 156

6. ಎಐಆರ್ 1993 ಎಸ್‌ಸಿ 2644

ಮನೆಯಾಗಿರುತ್ತದೆ. ಆದುದರಿಂದ ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಾಂಶದಲ್ಲಿ ಪ್ರಾಸಿಕ್ಯೂಷನ್ ಅವರು ಮೊಕದ್ದಮೆಯಲ್ಲಿ ಎಲ್ಲಾ ಸಾಕ್ಷಿದಾರರು ಮೃತಳ ಹಿತಾಸಕ್ತಿದಾರರು ಎಂಬ ವಾದಾಂಶದಲ್ಲಿ ಯಾವುದೇ ಹುರುಳಿಲ್ಲ ಈ ವಾದಾಂಶವನ್ನು ಸ್ವೀಕರಿಸಲು ಸಾಧ್ಯವಿಲ್ಲ.

26. ನಾವು ಈಗಾಗಲೇ ಮೇಲೆ ಮಾಡಿದ ಚರ್ಚೆಯಂತೆ, 25.12.2008 ರಂದು ಮೃತಳು ತನ್ನ ಗಂಡನೊಂದಿಗೆ ಕಲಘಟಗಿಗೆ ಹೋಗಿರುವ ಅಂಶಕ್ಕೆ ಪ್ರಾಸಿಕ್ಯೂಷನ್ ಅವರು ತಮ್ಮ ವಾದಾಂಶದಲ್ಲಿ ಪೂರಕವಾದ ವಸ್ತುವಿಷಯವನ್ನು ನಿರೂಪಿಸಿರುತ್ತಾರೆ. ಆದುದರಿಂದ, ಪ್ರಾ.ಸಾ.ಗಳಾದ 5 ಮತ್ತು 13 ಇವರ ಸಾಕ್ಷ್ಯವನ್ನು ಅಂದರೆ ಮೃತಳು ತನ್ನ ಗಂಡನ ವಿರುದ್ಧ ಹಣ ತರಬೇಕೆಂದು ಆತ ನೀಡುತ್ತಿದ್ದ ಚಿತ್ರಹಿಂಸೆ ಮತ್ತು ಕಿರುಕುಳದ ಬಗ್ಗೆ ದೂರು ಹೇಳಿರುತ್ತಾಳೆ ಆದುದರಿಂದ ಅದನ್ನು ಮೃತಳ ಮರಣ ಹೇಳಿಕೆಯಾಗಿ ಸಾಕ್ಷ್ಯ ಅಧಿನಿಯಮದ 32(1)ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಸುಸಂಗತ ಸಾಕ್ಷ್ಯದ ಭಾಗವಾಗಿ ಪರಿಗಣಿಸುತ್ತೇವೆ.

27. ಮೊಕದ್ದಮೆಯ ಮತ್ತೊಂದು ಪ್ರಮುಖವಾದ ಅಂಶವೆಂದರೆ, ಇದೊಂದು ದುರ್ಘಟನೆಯಾಗಿದೆ. ವಾಸದ ಮನೆಯೊಳಗೆ ನಡೆದ ದುರ್ಘಟನೆಯಾಗಿದೆ. ವಾಸದ ಮನೆಯಲ್ಲಿ ಆಪಾದಿತ, ಮೃತಳು ಮತ್ತು ಅವರ ಮಗು ಮಾತ್ರವೇ ಮನೆಯಲ್ಲಿ ವಾಸವಾಗಿರುತ್ತಾರೆ. ದುರ್ಘಟನೆಯೂ 25/26.12.2008ರ ಮಧ್ಯರಾತ್ರಿ ಹಾಗೂ ಬೆಳಗಿನ ಜಾವದ ಸಮಯದಲ್ಲಿ ನಡೆದಿರುತ್ತದೆ; ಆಪಾದಿತನು ಪ್ರತಿವಾದವು ಆ ರಾತ್ರಿಯ ಅವಧಿಯಲ್ಲಿ ಮನೆಯಲ್ಲಿ ಇರಲಿಲ್ಲ ಎಂಬುವಷ್ಟರ ಮಟ್ಟಿಗೆ ಮಾತ್ರವೇ ಬೇರೆಕಡೆ ಇರುವ ಸಂಬಂಧದಲ್ಲಿ ವಾದವನ್ನು ಮಂಡಿಸಲಾಗಿರುತ್ತದೆ, ನಾವು ಈಗಾಗಲೇ ಆ ಬಗ್ಗೆ ಅಭಿಲೇಖದ ಮೇಲೆ ಮಂಡಿಸಲಾದ ಉಲ್ಲೇಖಗಳ ಮತ್ತು ವಿಷಯದೊಂದಿಗೆ ವಿವರವಾಗಿ ಚರ್ಚಿಸಿದ್ದೇವೆ ಮತ್ತು ನಾವು, ಆಪಾದಿತ ಘಟನೆ ನಡೆದ ರಾತ್ರಿ ಮನೆಯಲ್ಲಿ ಇಲ್ಲದಿರುವ ಸಂಬಂಧದಲ್ಲಿನ ಅವನ ವಾದವನ್ನು ಅವನು ಸಾಬೀತುಪಡಿಸುವುದಕ್ಕೆ ಆಪಾದಿತನು ಸಂಪೂರ್ಣವಾಗಿ ವಿಫಲವಾಗಿರುತ್ತಾನೆ

ಮತ್ತು ಘಟನೆ ನಡೆದ ರಾತ್ರಿ ಆಪಾದಿತನು ಮನೆಯಲ್ಲಿ ಇದ್ದನೆಂಬ ನಿರ್ಣಯಕ್ಕೆ ಈಗಾಗಲೇ ಬಂದಿರುತ್ತೇವೆ/ ಹೀಗಿರುವಾಗ, ಆಪಾದಿತನು ತನ್ನ ಮನೆಯೊಳಗೆ ನಡೆದಿರುವ ಸದರಿ ಘಟನೆ ಹೇಗೆ ಮತ್ತು ಯಾಕಾಗಿ ನಡೆಯಿತು ಎಂಬುದನ್ನು ತೃಪ್ತಿಕರವಾಗಿ ವಿವರಿಸಬೇಕಾಗಿದೆ; ಆಪಾದಿತ ಮನೆಯಲ್ಲಿ ಇಲ್ಲದಿರುವಾಗ ಯಾರೇ ಬೇರೆಯವರು ಮನೆಗೆ ಬಂದು ಅವನ ಹೆಂಡತಿಯನ್ನು ಕೊಲೆ ಮಾಡಿರುತ್ತಾರೆ ಎಂಬುದು ಸಹ ಆಪಾದಿತನ ಪ್ರತಿವಾದವಾಗಿರುವುದಿಲ್ಲ.

28. ಆಪಾದಿತನನ್ನು ಅಧಿವಿಚಾರಣೆಯ ಸಮಯದಲ್ಲಿ ಪ್ರತಿವಾದಿಯಾದ ಆಪಾದಿತ ನೀಡಿದ ವಿವರಣೆ ಮತ್ತು ಪ್ರಾಸಿಕ್ಯೂಷನ್ ಸಾಕ್ಷಿದಾರರ ಪಾಟೀ–ಸವಾಲಿನ ಸಮಯದಲ್ಲಿ, ಮೃತಳ ಸಹೋದರಿಯಾದ ವೇದಶ್ರಿ ಬೇರೆ ಯಾರೊಂದಿಗೋ ಓಡಿಹೋದ ವಿಚಾರವು ದುರ್ಘಟನೆ ನಡೆದ ಸಂದರ್ಭದಲ್ಲಿ ನಡೆದಿರುವಾಗ, ಮೃತ ಅಶ್ವಿನಿಗೆ ಆ ವಿಚಾರ ತಿಳಿದು ಸೂಕ್ಷ್ಮಮತಿಯಾದ ಅಶ್ವಿನಿ, ತುಂಬಾ ಖಿನ್ನತೆಗೆ ಒಳಗಾಗಿ, ಅ ವಿಚಾರವಾಗಿಯೇ ಅವಳು ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದು ಪ್ರತಿವಾದಿಯೂ ವಿವರಿಸಿರುತ್ತಾನೆ. ಈ ಸದರಿ ಪ್ರತಿವಾದದ ಕಥೆಯನ್ನು ಪ್ರಾಸಿಕ್ಯೂಷನ್ ಸಾಕ್ಷಿದಾರರೆಲ್ಲರೂ ನಿರಾಕರಿಸಿರುತ್ತಾರೆ.

29. ವೈದ್ಯಕೀಯ ಸಾಕ್ಷ್ಯವನ್ನು ಅವಲೋಕಿಸಿದಾಗ, ನಾವು ಈಗಾಗಲೇ ಮೇಲೆ ಮಾಡಿದ ವಿವರವಾದ ಚರ್ಚೆಯ ಪ್ರಕಾರದಂತೆ, ಮೃತಳು ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯನ್ನು ಒಪ್ಪಲು ಸಾಧ್ಯವಿಲ್ಲ ಮತ್ತು ಪ್ರತಿಯಾಗಿ ವೈದ್ಯಕೀಯ ಸಾಕ್ಷ್ಯವು ಇದೊಂದು ಕೊಲೆ ಎಂದು ಸಾಬೀತುಪಡಿಸುತ್ತದೆ. ಇಂತಹ ಸನ್ನಿವೇಶಗಳ ಅಡಿಯಲ್ಲಿ, ಆಪಾದಿತನು ತನ್ನ ಮನೆಯೊಳಗೆ ನಡೆದ ದುರ್ಘಟನೆಯೂ ಹೇಗೆ ನಡೆಯಿತು ಎಂಬುದನ್ನು ವಿವರಿಸಬೇಕಾದುದು ಆಪಾದಿತನ ಹೊಣೆಗಾರಿಕೆಯಾಗಿರುತ್ತದೆ. ಈ ಸಂಬಂಧದಲ್ಲಿ ರಾಜ್ಯದ ಮಾನ್ಯ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಅವರು ***ತ್ರಿಮುಖ್ ಮರೊಟಿ ಕಿರ್‌ಕನ್ –ವಿರುದ್ಧ– ಮಹಾರಾಷ್ಟ್ರ ರಾಜ್ಯ***[6] ಮೊಕದ್ದಮೆಯಲ್ಲಿ

6. ಕ್ರಿಮಿನಲ್ ಅಪೀಲು ಸಂ.1341/2005

ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿದ ನಿರ್ಣಯವನ್ನು ನಿದರ್ಶನವಾಗಿ ನೀಡಿರುತ್ತಾರೆ, ನಿರ್ಣಯದ 12ನೇ ಪ್ಯಾರಾಗ್ರಾಫ್‌ನ ಸುಸಂಗತ ಭಾಗವು ಈ ಕೆಳಗಿನಂತಿದೆ:

> *"12. ಮನೆಯ ಖಾಸಗೀಸ್ಥಳದಲ್ಲಿ ಅಪರಾಧವೇನಾದರೂ ನಡೆದಿದ್ದರೆ ಮತ್ತು ಅಂತಹ ಸಂದರ್ಭಗಳಲ್ಲಿ ಹಲ್ಲೆಮಾಡಿದವರು ಅಪರಾಧ ಎಸಗುವ ಸಮಯದಲ್ಲಿ ತಮಗೆ ಬೇಕಾದ ಹಾಗೇ ಯೋಜನೆ ಮಾಡಿಕೊಳ್ಳಲು ಎಲ್ಲಾ ಅವಕಾಶವನ್ನು ಮತ್ತು ತಮ್ಮ ಆಯ್ಕೆಯಂತೆ ಸನ್ನಿವೇಶಗಳನ್ನು ಸೃಜಿಸಿಕೊಂಡಿರುವಾಗ, ಈ ಸಂದರ್ಭಗಳಲ್ಲಿ ಪ್ರಾಸಿಕ್ಯೂಷನ್ ಅವರಿಗೆ ಆಪಾದಿತನನ್ನು ತಪ್ಪಿತಸ್ಥನೆಂದು ಸಾಬೀತು ಪಡಿಸುವುದಕ್ಕೆ ಅಗತ್ಯವಿರುವ ಪ್ರಮುಖ ಸಾಕ್ಷ್ಯಗಳನ್ನು ಸಾಂದರ್ಭಿಕ ಸಾಕ್ಷ್ಯಗಳ ಕರಾರುವಕ್ಕಾದ ತತ್ವ ಸಿದ್ಧಾಂತಗಳಿಂದ ಕಲೆ ಹಾಕುವುದು ತುಂಬಾ ಕಷ್ಟಕರವಾಗಿ ಪರಿಣಮಿಸುತ್ತವೆ, ಮೇಲಿನದ್ದನ್ನು ಗಮನಕ್ಕೆ ತಂದುಕೊಂಡು, ನ್ಯಾಯಾಲಯಗಳು ಈ ಸಂಬಂಧದಲ್ಲಿ ಕ್ರಮಗಳಿಗೆ ಒತ್ತಾಯಿಸಿವೆ. ನ್ಯಾಯಾಧೀಶನು ಎಂತಹ ಕ್ರಿಮಿನಲ್ ಅಧಿವಿಚಾರಣೆಯಲ್ಲಿ ಯಾರೊಬ್ಬ ನಿರಪರಾಧಿಗೂ ಶಿಕ್ಷೆಯಾಗಬಾರದು ಎಂಬ ಮಹತ್ವದ ವಿಚಾರದ ಕಡೆಗೆ ಗಮನವನ್ನು ಕೊಡುತ್ತಾನೆ. ಹಾಗೇನೆ ನ್ಯಾಯಾಧೀಶನು ತಪ್ಪಿತಸ್ಥನು ತಪ್ಪಿಸಿಕೊಳ್ಳಬಾರದು ಎಂಬ ವಿಚಾರಕ್ಕೂ ಮಹತ್ವವಾದ ಗಮನವನ್ನು ಕೊಡುತ್ತಾನೆ. ಈ ಎರಡು ಮುಖ್ಯ ವಿಚಾರಗಳು ಸಾರ್ವಜನಿಕರ ಹಿತಾಸಕ್ತಿಯು ಕರ್ತವ್ಯವಾಗಿರುತ್ತದೆ. ((2003) 11 ಎಸ್‌ಸಿಸಿ 271 ರಲ್ಲಿನ ಪಂಜಾಬ್ ರಾಜ್ಯ –ವಿರುದ್ಧ– ಕರ್ನೈಲ್ ಸಿಂಗ್ ಮೊಕದ್ದಮೆಯಲ್ಲಿ ಅರಿಜಿತ್ ಪಸಯತ್, ಜೆ ಅವರು ಅನುಮೋದನೆಯೊಂದಿಗೆ 315 ರಲ್ಲಿ ಉಲ್ಲೇಖಿಸಿದ ಸ್ಟರ್ಲಾಂಡ್ –ವಿರುದ್ಧ– ನಿರ್ದೇಶಕರು ಪಬ್ಲಿಕ್*

*ಪ್ರಾಸಿಕ್ಯೂಷನ್ ಆಕ್ಟ್, 1944ನ ನೋಡಿ). ಅಸಾಧ್ಯವಾಗುವಂತಹ ಅಥವಾ ವಿಪರೀತ ತ್ರಾಸದಾಯಕ ವಾಗುವಂತಹ ಸ್ಥಳಗಳಲ್ಲಿ ಸಾಕ್ಷ್ಯಗಳನ್ನು ಕಲೆ ಹಾಕುವುದು ಪ್ರಾಸಿಕ್ಯೂಷನ್ ಅವರ ಕರ್ತವ್ಯವೆಂದು ಕಾನೂನು ಆದೇಶಿಸುವುದಿಲ್ಲ. ಮೊಕದ್ದಮೆಯ ಸಂಗತಿ ಮತ್ತು ಸನ್ನಿವೇಶಕ್ಕೆ ಸಂಬಂಧಿಸಿದಂತೆ ಸಾಕ್ಷ್ಯಗಳನ್ನು ಕಲೆಹಾಕುವುದು ಪ್ರಾಸಿಕ್ಯೂಷನ್‌ನ ಕರ್ತವ್ಯವಾಗಿರುತ್ತದೆ. ಅದನ್ನು ಮಾಡುವಾಗ ಸಾಕ್ಷ್ಯ ಅಧಿನಿಯಮದ 106ನೇ ಪ್ರಕರಣವನ್ನು ಗಮನಕ್ಕೆ ತಂದುಕೊಳ್ಳುವುದು ಅವಶ್ಯವಾಗಿದೆ, ಸಾಕ್ಷ್ಯ ಅಧಿನಿಯಮದ 106ನೇ ಪ್ರಕರಣವು ಈ ರೀತಿ ಹೇಳುತ್ತದೆ, ಯಾರೇ ವ್ಯಕ್ತಿಯು ತಿಳುವಳಿಕೆಯೊಳಗೆ ಯಾವುದೇ ಸಂಗತಿ ನಿರ್ದಿಷ್ಟವಾಗಿ ನಡೆದಿರುವಾಗ, ಆ ಸಂಗತಿಯನ್ನು ರುಜುವಾತುಪಡಿಸುವ ಹೊಣೆಗಾರಿಕೆಯೂ ಆ ವ್ಯಕ್ತಿಯದೇ ಆಗಿರುತ್ತದೆ. ಈ ಪ್ರಕರಣದಲ್ಲಿ ಅನುಬಂಧಿಸಿದ ದೃಷ್ಟಾಂತ (ಬಿ)ಯೂ ಈ ಉಪಬಂಧದ ಉದ್ದೇಶ ಮತ್ತು ವ್ಯಾಪ್ತಿಯ ಮೇಲೆ ಬೆಳಕು ಚೆಲ್ಲುತ್ತವೆ ಮತ್ತು ಅದು ಕೆಳಗಿನಂತಿದೆ.*

*(ಬಿ) 'ಎ' ಎಂಬುವನು ಟಿಕೇಟು ಇಲ್ಲದೇ ರೈಲಿನಲ್ಲಿ ಪ್ರಯಾಣ ಮಾಡಿದ್ದಾನೆಂದು ಆಪಾದಿತನಾಗಿದ್ದಾನೆ. ತಾನು ಟಿಕೇಟು ಹೊಂದಿದ್ದೆ ಎಂಬುದನ್ನು ಸಾಬೀತು ಮಾಡುವ ಭಾರವು ಅವನ ಮೇಲೆಯೇ ಇರುತ್ತದೆ."*

*ಮನೆಯ ಒಳಗೆ ರಹಸ್ಯವಾಗಿ ಎಸಗುವ ಕೊಲೆಯಂತಹ ಅಪರಾಧಗಳು ನಡೆದಿರುವಾಗ, ಪ್ರಾಸಿಕ್ಯೂಷನ್ ಅದನ್ನು ಅದೊಂದು ಕೊಲೆ ಎಂದು ನಿಸ್ಸಂಶಯವಾಗಿ ಸಾಬೀತುಪಡಿಸುವ ಸಂಪೂರ್ಣ ಹೊಣೆಗಾರಿಕೆ ಪ್ರಾಸಿಕ್ಯೂಷನ್ ಅವರ ಮೇಲಿರುತ್ತವೆ, ಆದರೆ*

*ಅಪರಾಧವನ್ನು ಸಾಬೀತುಪಡಿಸುವುದಕ್ಕೆ ಅದು ಸಾಕ್ಷ್ಯದ ಸ್ವರೂಪವನ್ನು ಮತ್ತು ತಾತ್ಪರ್ಯವನ್ನು ಕಲೆ ಹಾಕಬೇಕಾಗುತ್ತದೆ, ಇತರ ಸಂದರ್ಭಗಳಲ್ಲಿ ಸಾಂದರ್ಭಿಕ ಸಾಕ್ಷ್ಯಗಳಲ್ಲಿ ಅಗತ್ಯಪಡಿಸಿದ ಅದೇ ಕಾರ್ಯತತ್ಪಾರತೆಯನ್ನು ವಿಧಿಸಬಾರದು. ತುಲನಾತ್ಮಕ ಅಂಶಗಳಿಂದ ಅಪರಾಧವನ್ನು ಸಾಬೀತುಪಡಿಸುವ ಹೊಣೆಯನ್ನು ಅದು ಹೊಂದಿರುತ್ತದೆ. ಸಾಕ್ಷ್ಯ ಅಧಿನಿಯಮದ 106ನೇ ಪ್ರಕರಣದ ದೃಷ್ಟಿಯಲ್ಲಿ, ಮನೆಯ ನಿವಾಸಿಯೇ ಅಪರಾಧವನ್ನು ಎಸಗಿದ್ದರೆ, ಅಪರಾಧವು ಹೇಗಾಯಿತು ಎಂಬುದಕ್ಕೆ ಸಮರ್ಪಕ ವಿವರಣೆಗಳನ್ನು ಪಡೆದುಕೊಳ್ಳುವುದು ಸಂವಾದಿ ಹೊಣೆಗಾರಿಕೆಯಾಗಿರುತ್ತದೆ. ಅಪರಾಧದ ಸಂಬಂಧದಲ್ಲಿ ಮನೆಯ ನಿವಾಸಿಗಳು ಯಾವುದೇ ಮಾಹಿತಿ ನೀಡದೆ ಸುಮ್ಮನೆ ಇರುವುದಕ್ಕೆ ಅವಕಾಶ ನೀಡುವುದಿಲ್ಲ ಮತ್ತು ಕಲ್ಪಿತ ಆವರಣಗಳ ಮೇಲೆ ಮಾಡುವ ಸವಿವರಣೆಗಳನ್ನು ಸ್ವೀಕರಿಸುವುದಿಲ್ಲ, ಪ್ರಾಸಿಕ್ಯೂಷನ್ ಅವರು ಸಂಪೂರ್ಣವಾಗಿ ದಾವೆಯಲ್ಲಿ ಅದನ್ನು ಸಾಬೀತುಪಡಿಸುವುದಕ್ಕೆ ಹೊಣೆಯನ್ನು ಹೊಂದಿರುತ್ತಾರೆ ಮತ್ತು ಆಪಾದಿತನು ಮಂಡಿಸಿದ ಯಾವುದೇ ವಿವರಣೆಗಳೆಲ್ಲವನ್ನು ಒಪ್ಪಿಕೊಳ್ಳುವುದು ಪ್ರಾಸಿಕ್ಯೂಷನ್ ಅವರ ಕರ್ತವ್ಯವಾಗಿರುವುದಿಲ್ಲ.”*

30. ಆದುದರಿಂದ, ಸದರಿ ನಿರ್ಣಯದಲ್ಲಿ ಸ್ಪಷ್ಟವಾಗಿ ನಿರೂಪಿಸಿದ ತತ್ವವನ್ನು ಅವಲೋಕಿಸಿದಾಗ, ಆಪಾದಿತನು ಘಟನೆಯ ವಿವರಣೆ ನೀಡಬೇಕಾದ ವ್ಯಕ್ತಿಯಾಗಿರುವ ಸಂದರ್ಭದಲ್ಲಿ, ಆಪಾದಿತನು ಪ್ರತಿವಾದಿಯಾಗಿರುವುದನ್ನು ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ ಮತ್ತು ಪ್ರಾಸಿಕ್ಯೂಷನ್ ಸಾಕ್ಷಿಗಳ ಪಾಟೀ–ಸವಾಲಿನಲ್ಲಿ ಆಪಾದಿತನು ಅದರಲ್ಲೂ ಆತ್ಮಹತ್ಯೆಯಂತಹ ಮೊಕದ್ದಮೆಯ ಸಂದರ್ಭದಲ್ಲಿ ತನ್ನ ಪ್ರತಿವಾದವನ್ನು ಸಾಬೀತು ಪಡಿಸುವುದಕ್ಕೆ ಸಂಪೂರ್ಣವಾಗಿ ವಿಫಲನಾಗಿರುವಾಗ ಮತ್ತು ಘಟನೆ ನಡೆದ ರಾತ್ರಿ ತಾನು ಮನೆಯಲ್ಲಿ ಇರುವುದಿಲ್ಲ, ಹಾಗೂ ಆ ರಾತ್ರಿ

ಆಪಾದಿತನು ಕೊಪ್ಪಳದಲ್ಲಿದ್ದ ಎಂಬುದನ್ನು ಸಹ ಸಾಬೀತುಪಡಿಸುವಲ್ಲಿ ವಿಫಲನಾಗಿರುತ್ತಾನೆ. ಅಲ್ಲದೆ, ಘಟನೆಯ ಬಗ್ಗೆ ಆಪಾದಿತನು ಇದೂವರೆಗೆ ವಿವರಣೆಯನ್ನು ಸಹ ಕೊಟ್ಟಿರುವುದಿಲ್ಲ, ಅವನು ಕೇವಲ ಕಾನೂನಿನ ಬಿಗಿಮುಷ್ಠಿಯಿಂದ ತಪ್ಪಿಸಿಕೊಳ್ಳುವ ಏಕೈಕ ಉದ್ದೇಶದಿಂದಲೇ ತಪ್ಪಾದ ಪ್ರತಿವಾದವನ್ನು ಹೂಡಿರುತ್ತಾನೆ ಎಂಬುದು ಇದರಿಂದ ಸ್ಪಷ್ಟವಾಗಿರುತ್ತದೆ.

31. ಶವಪರೀಕ್ಷೆ ಮಾಡಿದ ವೈದ್ಯರ ಸಾಕ್ಷ್ಯದಲ್ಲಿ ಮತ್ತು ಮರಣೋತ್ತರ ಪರೀಕ್ಷೆಯ ವಾದಾಂಶದಲ್ಲಿ ಇದೊಂದು ಕೈಗಳಿಂದ ಕತ್ತುಹಿಸುಕಿ (ಉಸಿರುಗಟ್ಟಿಸಿ) ಮಾಡಿದ ನರಹತ್ಯೆಯಾಗಿರುತ್ತದೆ. ಆದುದರಿಂದ, ಮೃತ ಅಶ್ವಿನಿ ಮರಣದ ಸಂಪೂರ್ಣ ಹೊಣೆಗಾರಿಕೆ ಆಪಾದಿತನೊಬ್ಬನದೇ ಆಗಿರುತ್ತದೆ ಎಂಬುದು ನಮ್ಮ ಸ್ಪಷ್ಟವಾದ ಅಭಿಪ್ರಾಯವಾಗಿರುತ್ತದೆ.

32. ದೂರುದಾರರು ದೂರನ್ನು ವಿಳಂಬವಾಗಿ ದಾಖಲಿಸಿರುವ ಸಂಬಂಧದಲ್ಲಿ ಪ್ರತಿವಾದಿಗಳು ಎತ್ತಿರುವ ವಾದಾಂಶದಷ್ಟರಮಟ್ಟಿಗೆ, ಆಪಾದಿಸಲಾದ ಅಪರಾಧವು 25.12.2008 ಹಾಗೂ 26.12.2008ರ ನಡುವಿನ ಮಧ್ಯರಾತ್ರಿ ಹಾಗೂ ಬೆಳಗಿನ ಜಾವ ನಡೆದ ಘಟನೆಯಾಗಿದೆ ಎಂದೆ ವಸ್ತುವಿಷಯದಲ್ಲಿ ನಿರೂಪಿತವಾಗಿದೆ ಮತ್ತು ದೂರುದಾರ/ಪ್ರಾ.ಸಾ.1ರ ಪ್ರಕಾರದಂತೆ, ಆಪಾದಿತನು 26.12.2008ರ ಬೆಳಗಿನ ಜಾವ 4.30 ಗಂಟೆಯ ಸುಮಾರಿಗೆ ದೂರುದಾರರ ಮೊಬೈಲಿಗೆ ಆಪಾದಿತನ ತನ್ನ ಮೊಬೈಲಿನ ಮೂಲಕ ಘಟನೆಯ ಬಗ್ಗೆ ತಿಳಿಸಿರುತ್ತಾನೆ ಮತ್ತು ಘಟನೆಯ ಬಗ್ಗೆ ತಿಳಿದು ಆ ಕೂಡಲೇ ಘಟನೆಯ ಸ್ಥಳಕ್ಕೆ ಹೋಗಲು ಪ್ರಾ.ಸಾ.1ನಿಗೆ ಅನಾನುಕೂಲವಾದುದರಿಂದ ಪ್ರಾ.ಸಾ.1 ಆಕೂಡಲೇ ಘಟನೆಯ ಸ್ಥಳಕ್ಕೆ ಹೋಗುವುದಕ್ಕೆ ಪ್ರಾ.ಸಾ.ಗಳಾದ 3 ಮತ್ತು 5 ಅವರುಗಳಿಗೆ ತಿಳಿಸಿರುತ್ತಾನೆ ಮತ್ತು ಅವನು ಸ್ವಲ್ಪ ತಡವಾಗಿ ಘಟನೆಯ ಸ್ಥಳಕ್ಕೆ ಬಂದಿರುತ್ತಾನೆ. ಇತರ ವಸ್ತುವಿಷಯಗಳನ್ನು ನಾವು ಈಗಾಗಲೇ ಚರ್ಚೆಮಾಡಿರುತ್ತೇವೆ, ಅದರಲ್ಲಿ ಘಟನೆಯ ಸ್ಥಳಕ್ಕೆ ಪ್ರಾ.ಸಾ.ಗಳಾದ 3, 5 ಮತ್ತು ಮೃತಳ ಇತರ ಸಂಬಂಧಿಕರು ಬಂದಾಗ ಮನೆಗೆ ಬೀಗ ಹಾಕಿರುತ್ತದೆ

ಮತ್ತು ಆಪಾದಿತನು ಬೆಳಿಗ್ಗೆ 10.30 ಗಂಟೆಯ ಸುಮಾರಿಗೆ ಬಂದು, ತನ್ನಲ್ಲಿದ್ದ ಬೀಗದ ಕೈಯಿಂದ ಮನೆಯ ಬೀಗವನ್ನು ತೆಗೆಯುವವರೆಗೂ ಅಲ್ಲಿ ಸೇರಿದವರೆಲ್ಲರಿಗೂ ಮನೆಯಲ್ಲಿ ಏನು ನಡೆದಿದೆ ಎಂಬುದು, ಯಾವ ಸ್ವರೂಪದ ಅಪರಾಧವು ಅಂದರೆ ಅದು ಆತ್ಮಹತ್ಯೆಯ ಮರಣವೇ ಅಥವಾ ಅದು ನರಹತ್ಯೆಯೇ ಮರಣವೇ ಎಂಬುದು ಯಾರಿಗೂ ನಿಖರವಾಗಿ ತಿಳಿದಿರುವುದಿಲ್ಲ. ಈ ಸಂಬಂಧದಲ್ಲಿ ಪ್ರಾ.ಸಾ.1 (ಆಪಾದಿತ)ನು ನೀಡಿದ ಸಾಕ್ಷ್ಯದ 2ನೇ ಸಂಖ್ಯೆಯ ಕಂಡಿಕೆಯಲ್ಲಿ ಆಪಾದಿತನ ಹೆಂಡತಿ ಅಶ್ವಿನಿ ಸಾವನ್ನಪ್ಪಿದ ಘಟನೆಯೂ ಆಪಾದಿತನಿಗೆ 26.12.2008ರ ಸುಮಾರಿಗೆ 6.00 ರಿಂದ 6.30 ಗಂಟೆಯಲ್ಲಿ ತಿಳಿದಿರುತ್ತದೆ ಎಂಬುದನ್ನು ಹೇಳಿಕೆಯಾಗಿ ನೀಡಿರುತ್ತಾನೆ. ಅವನು ಮುಂದುವರೆದು ಅಶ್ವಿನಿ ಆತ್ಮಹತ್ಯೆಮಾಡಿಕೊಂಡ ವಿಷಯವನ್ನು ಅವನ ಮನೆಯ ಮಾಲೀಕರಾದ ಬಸವರಾಜು ಮತ್ತು ಅವನ ಭಾವಮೈದುನನಾದ ವಿರೂಪಾಕ್ಷಪ್ಪ ಅವರು ದೂರವಾಣಿಯ ಮೂಲಕ ಈ ವಿಷಯವನ್ನು ತಿಳಿಸಿರುತ್ತಾರೆ ಎಂದು ತಿಳಿಸಿರುತ್ತಾನೆ. ನಂತರದಲ್ಲಿ ಘಟನೆಯ ಬಗ್ಗೆ ತಿಳಿದು ಸ್ವತಃ ತಾನು, ಅವನ ತಂದೆ–ತಾಯಿಗಳು, ಅವನ ಸಹೋದರ ಮತ್ತು ಅವನ ಮಗ ಎಲ್ಲರು ಘಟನೆಯ ಸ್ಥಳಕ್ಕೆ ಸುಮಾರು 11.00 ಗಂಟೆಯಷ್ಟರಲ್ಲಿ ಬಂದಿರುತ್ತೇವೆ ಎಂದು ಹೇಳಿರುತ್ತಾನೆ. ತಾನು ಸ್ಥಳಕ್ಕೆ ಬಂದ ಅರ್ಧಗಂಟೆಯ ನಂತರ ಘಟನೆಯ ಸ್ಥಳಕ್ಕೆ ಪೊಲೀಸರು ಬಂದಿರುತ್ತಾರೆ ಎಂದು ಸಹ ತಿಳಿಸಿರುತ್ತಾನೆ. ಆಪಾದಿತನು ತನ್ನ ಸಾಕ್ಷ್ಯದಲ್ಲಿ ಘಟನೆಯ ಸ್ಥಳಕ್ಕೆ ಪೊಲೀಸರು ಬೆಳಿಗ್ಗೆ 11.30 ಗಂಟೆಯ ನಂತರ ಮಾತ್ರವೇ ಬಂದಿರುತ್ತಾರೆ ಎಂದು ಸಹ ಹೇಳಿಕೆ ನೀಡಿರುವುದು ಅವನ ಸಾಕ್ಷ್ಯದಲ್ಲಿ ಕಂಡುಬರುತ್ತದೆ. ಮಧ್ಯಾಹ್ನ 1.00 ಗಂಟೆಯ ಸುಮಾರಿಗೆ ದೂರು ದಾಖಲಾಗಿರುತ್ತದೆ ತ್ತು ಪೊಲೀಸರು ಘಟನೆಯ ಸ್ಥಳಕ್ಕೆ ಬಂದಿರುವುದಕ್ಕೂ ದೂರು ದಾಖಲಾಗುವುದಕ್ಕೂ ಸುಮಾರು $1^1/_2$ ಗಂಟೆಯ ಅಂತರವಿರುವುದು ಕಂಡುಬರುತ್ತದೆ. ಮೇಲೆ ಉಲ್ಲೇಖಿಸಿದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ***ಲಲಿತ ಕುಮಾರಿ –ವಿರುದ್ಧ– ಉತ್ತರ ಪ್ರದೇಶ ಮತ್ತು ಇತರರು*** ಮೊಕದ್ದಮೆಯಲ್ಲಿ ನಿರ್ಣಯ ಕುರಿತು ಈಗಾಗಲೇ ನಾವು ಮಾಡಿದ ಚರ್ಚೆಯಂತೆ, ವೈವಾಹಿಕ ವಿವಾದ/ಕುಟುಂಬ ವಿವಾದ/ವಾಣಿಜ್ಯ ವಿವಾದ/ ಭ್ರಷ್ಟಾಚಾರ ಮೊಕದ್ದಮೆಗಳು ಇಂತಹ ಸ್ವರೂಪದ ಮೊಕದ್ದಮೆಗಳಲ್ಲಿ ಪ್ರಾರಂಭಿಕ

ತನಿಖೆಯನ್ನು ವರ್ಗೀಕರಿಸುವುದನ್ನು ಅಗತ್ಯಪಡಿಸುತ್ತದೆ. ಆದುದರಿಂದ, ಈ ಅಂಶಗಳಿಂದ ಸದರಿ ಮೊಕದ್ದಮೆಯನ್ನು ಪರ್ಯಾವಲೋಚಿಸಿದಾಗ ಮೊಕದ್ದಮೆಯನ್ನು ದಾಖಲಿಸುವುದಕ್ಕೆ ಆಗಿರುವ ವಿಳಂಬವನ್ನು ಅಸಾಮಾನ್ಯ ವಿವರಿಸಲಾಗದ ವಿಳಂಬವೆಂದು ಹೇಳಲು ಬರುವುದಿಲ್ಲ. ಪ್ರಾ.ಸಾ.1 ದೂರನ್ನು ದಾಖಲಿಸುವಷ್ಟರ ಮಟ್ಟಿಗೆ ಪ್ರಾ.ಸಾ.1 ಮತ್ತು ಇತರ ಪ್ರಾಸಿಕ್ಯೂಷನ್ ಸಾಕ್ಷಿದಾರರ ಸಾಕ್ಷ್ಯಗಳಲ್ಲಿ ಕೆಲವೊಂದು ಚಿಕ್ಕ–ಪುಟ್ಟ ವ್ಯತ್ಯಾಸಗಳು ಕಂಡುಬರದಿರುವುದು ಸಂದೇಹಕ್ಕೆ ಆಸ್ಪದವನ್ನು ನೀಡುವುದಿಲ್ಲ. ಕಂಡುಬಂದಿರುವ ಚಿಕ್ಕ–ಪುಟ್ಟ ವ್ಯತ್ಯಾಸಗಳು ಮೊಕದ್ದಮೆಯ ಮೂಲಾಧಾರವು ಆಗಿರುವುದಿಲ್ಲ, ಈ ವ್ಯತ್ಯಾಸಗಳಿಂದಲೇ ಇಡೀ ಮೊಕದ್ದಮೆಯ ವ್ಯವಹರಣೆಗಳೆಲ್ಲವು ತಪ್ಪು ಎಂಬ ನಿರ್ಣಯಕ್ಕೆ ಬಂದರೆ ಅದು ಆಪಾದಿತನ ಕೃತ್ರಿಮ ದೋಷಾರೋಪಣೆಯಲ್ಲಿ ಈ ಮೊಕದ್ದಮೆಯೂ ಸಿಕ್ಕಿ ಹಾಕಿಕೊಳ್ಳುತ್ತದೆ. ನ್ಯಾಯಾಲಯ ಅಭಿಲೇಖದ ಮೇಲೆ ಮಂಡಿಸಿದ ಎಲ್ಲಾ ವಸ್ತುವಿಷಯವನ್ನು ಅಮೂಲಾಗ್ರವಾಗಿ ಪರಿಶೀಲಿಸಿರುತ್ತದೆ ಮತ್ತು ಕಂಡುಬರುವ ಸಂಚಿತ ಪರಿಣಾಮವನ್ನು ಮೀರಿ ಪರ್ಯಾಲೋಚಿಸಿರುತ್ತದೆ ಮತ್ತು ನ್ಯಾಯಾಲಯವು ಪ್ರತ್ಯೇಕಿತ ವಸ್ತುವಿಷಯಗಳನ್ನು ಪರಿಗಣಿಸುವ ಮೂಲಕ ಅದು ನಿರ್ಣಯಗಳನ್ನು ನೀಡುವುದಿಲ್ಲ. ಆದುದರಿಂದ, ನಾವು, ಈ ಮೊಕದ್ದಮೆಯಲ್ಲಿ ದೂರನ್ನು ದಾಖಲಿಸಲು ಆಗಿರುವ ವಿಳಂಬವನ್ನು ಉದ್ದೇಶಪೂರ್ವಕವಾದ ವಿಳಂಬವಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ. ಅದರಿಂದ ಈ ಸಂಬಂಧದಲ್ಲಿ ಪ್ರತಿವಾದಿಯ ವಾದಾಂಶವನ್ನು ಸ್ವೀಕರಿಸಲು ಬರುವುದಿಲ್ಲ.

33. ವಾದಗಳು ನಡೆಯುತ್ತಿರುವ ಅವಧಿಯಲ್ಲಿ, ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು, ಆಪಾದಿತನ ಪರವಾಗಿ ನಿವೇದಿಸಿದ ಪರ್ಯಾಯ ವಾದದ ನಿವೇದನೆಯೂ ಹೀಗಿದೆ. 25.12.2008 ರಂದು ಆಪಾದಿತನು ಕಲಘಟಗಿಯಲ್ಲಿರುವ ಸಂಬಂಧಿಕರ ಮನೆಗೆ ತನ್ನ ಹೆಂಡತಿ ಮತ್ತು ಮಗುವಿನೊಂದಿಗೆ ಹೋದಾಗ, ಆಪಾದಿತರ ಪತ್ನಿಯೂ ಸಂಬಂಧಿಗಳಾದ ಪ್ರಾ.ಸಾ.ಗಳಾದ 5 ಮತ್ತು 13 ಅವರಲ್ಲಿ ಮೃತ ಅಶ್ವಿನಿಯೂ ಮತ್ತಷ್ಟು ವರದಕ್ಷಿಣೆ ತರುವಂತೆ ಆಪಾದಿತನು ತನಗೆ ನೀಡುತ್ತಿದ್ದ ಚಿತ್ರಹಿಂಸೆ ಮತ್ತು ಕಿರುಕುಳ ಬಗ್ಗೆ ಅವರಲ್ಲಿ ಹೇಳಿದಾಗ ಪ್ರಾ.ಸಾ.ಗಳಾದ

5 ಮತ್ತು 13 ಆಪಾದಿತನಿಗೆ ಹಾಗೇ ಮಾಡಬಾರದೆಂದು ಬೈದು, ಬುದ್ಧಿಮಾತು ಹೇಳಿರುತ್ತಾರೆ. ಸಂಬಂಧಿಕರ ಬೈಗುಳ ಮತ್ತು ಬುದ್ಧಿಮಾತಿನ ಕಾರಣದಿಂದ ಆಪಾದಿತನು ತುಂಬಾ ಪ್ರಚೋದನೆಗೆ ಮತ್ತು ಆವೇಶಕ್ಕೆ ಒಳಗಾಗಿ ಆಪಾದಿತನು ಸದರಿ ಅಪರಾಧವನ್ನು ಎಸಗಿರುತ್ತಾನೆಂದು ಮತ್ತು ಕೊಲೆಯಂತಹ ಕೃತ್ಯ ಎಸುಗುವಂತಹ ಯಾವುದೇ ದುರುದ್ದೇಶ ಅವನು ಹೊಂದಿರಲಿಲ್ಲ ಆದರೆ ಇದು ಆವೇಶ ಮತ್ತು ಪ್ರಚೋದನೆಯಿಂದ ಆಕಸ್ಮಿಕವಾಗಿ ಸಂಭವಿಸಿದ ಘಟನೆಯಾಗಿರುತ್ತದೆ ಎಂದು ನಿವೇದಿಸಿರುವರು. ಅವರು ಮತ್ತಷ್ಟು ವಾದವನ್ನು ಮುಂದುವರೆಸಿ ಇಂತಹ ಸಂದರ್ಭದ ಮೊಕದ್ದಮೆಗಳು ಭಾರತ ದಂಡ ಸಂಹಿತೆಯ 304(2)ನೇ ಪ್ರಕರಣದ ಅಡಿಯಲ್ಲಿ ಬರುತ್ತದೆ ಎಂದರೆ, ಈ ಕೊಲೆಯನ್ನು ದಂಡನೀಯ ನರಹತ್ಯೆಯೆಂದು ಪರಿಗಣಿಸಬಾರದೆಂದು ವಾದಾಂಶದಲ್ಲಿ ನಿವೇದಿಸುತ್ತಾ, ಅಪೀಲುದಾರ ಈಗಾಗಲೇ ಜೀವಾವಧಿ ಶಿಕ್ಷೆಯನ್ನು ಏಳು ವರ್ಷಗಳ ಸೆರೆವಾಸವನ್ನು ಅನುಭವಿಸಿರುತ್ತಾನೆ, ಅದನ್ನು ಸಹ ಈ ಸಂದರ್ಭದಲ್ಲಿ ಪರಿಗಣಿಸಬೇಕೆಂದು ನಿವೇದಿಸಿರುತ್ತಾನೆ. ಆದರೆ ಈ ವಾದಾಂಶದ ಸಂಬಂಧದಲ್ಲಿ ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು, ಮೊದಲನೆಯದಾಗಿ ಪ್ರಾಸಿಕ್ಯೂಷನ್‌ರವರ ವಾದಾಂಶಕ್ಕೆ ಪೂರಕವಾಗಿ ಅಪೀಲುದಾರರ ವಾದಾಂಶವು ಕೂಡಿದೆ. 25.12.2008 ರಂದು ಆಪಾದಿತನು ತನ್ನ ಮೃತ ಹೆಂಡತಿ ಮತ್ತು ಮಗನೊಂದಿಗೆ ಕಲಘಟಗಿಯ ಸಂಬಂಧಿಕರಾದ ಪ್ರಾ.ಸಾ.5 ಮತ್ತು 13ರ ಅವರ ಮನೆಗೆ ಹೋಗಿರುವುದು ಮತ್ತು ಪ್ರಾ.ಸಾ.ಗಳ ಮುಂದೆ ಆಪಾದಿತನ ಪತ್ನಿ ಆಪಾದಿತನ ವಿರುದ್ದ ದೂರನ್ನು ಹೇಳಿದ್ದು, ಪ್ರಾ.ಸಾ.ಗಳು ಆಪಾದಿತನಿಗೆ ಬೈದು, ಬುದ್ಧಿಮಾತನ್ನು ಹೇಳಿದ್ದು ಎಲ್ಲಾ ವಿಚಾರಗಳು ಪ್ರಾಸಿಕ್ಯೂಷನ್‌ರ ವಾದಾಂಶಕ್ಕೆ ಪೂರಕವಾಗಿಯೋ ನಿರೂಪಿತವಾಗಿರುತ್ತವೆ. ಅಧಿವಿಚಾರಣೆಯ ಕಾಲಾವಧಿಯಲ್ಲಿ ಪ್ರತಿವಾದಿಯ ವಾದವು ಆವೇಶಕ್ಕೆ ಮತ್ತು ಆ ಕ್ಷಣದ ಪ್ರಚೋದನಗೆ ಒಳಗಾಗಿ ನಡೆದ ಘಟನೆಯಾಗಿರುತ್ತವೆ ಎಂಬುದನ್ನು ಒಪ್ಪಿಕೊಂಡಿರುವುದಿಲ್ಲ. ಆ ಅಧಿವಿಚಾರಣೆಯ ಸಮಯದಲ್ಲಿ ಪ್ರತಿವಾದಿಯ ವಾದವು ಘಟನೆ ನಡೆದಾಗ ಆಪಾದಿತನು ಘಟನೆಯ ಸ್ಥಳದಲ್ಲಿ ಅವನು ಇರುವುದಿಲ್ಲ, ಅವನು ಮತ್ತೆಲ್ಲಿಯೋ ಇದ್ದನೆಂದು ಸದರಿ ಘಟನೆಗೂ ಆಪಾದಿತನಿಗೂ ಯಾವುದೇ ಸಂಬಂಧವಿಲ್ಲವೆಂದು ವಾದವನ್ನು ಮಂಡಿಸಿರುತ್ತಾರೆ. ಇಂತಹ ಸನ್ನಿವೇಶಗಳಡಿಯಲ್ಲಿ ಮತ್ತು ನಿರ್ದಿಷ್ಟ

ಪ್ರತಿವಾದದ ಗೈರುಹಾಜರಿಯಲ್ಲಿ ಅಪೀಲುದಾರನ ಪರವಾಗಿ ಮಾನ್ಯ ನ್ಯಾಯವಾದಿಗಳು ಅಪೀಲುದಾರನು ಆವೇಶಕ್ಕೆ ಮತ್ತು ಆ ಕ್ಷಣದ ಪ್ರಚೋದನೆಗೆ ಒಳಗಾಗಿ ಈ ಕೃತ್ಯ ಎಸಗಿರುತ್ತಾನೆ ಎಂಬ ಆಧಾರ ಮಾತ್ರದಿಂದಲೇ ವಾದವನ್ನು ನಿರೂಪಿಸಬೇಕಾದ ಕಾರಣದಿಂದಲೇ ಅಪೀಲುದಾರನ ಪರವಾಗಿ ನ್ಯಾಯವಾದಿಗಳು ವಿಧಿಯಿಲ್ಲದೇ ಈ ಪರ್ಯಾಯ ವಾದವನ್ನು ನಿವೇದಿಸಿರುವರು. ಅದನ್ನು ಸ್ವೀಕರಿಸಲು ಸಾಧ್ಯವಿಲ್ಲ ಮತ್ತು ಅದನ್ನು ಈ ಮೂಲಕ ನಿರಾಕರಿಸಲಾಗಿದೆ.

34. ಅಭಿಲೇಖದ ಮೇಲೆ ಮಂಡಿತವಾದ ಸಂಪೂರ್ಣ ವಸ್ತುವಿಷಯವನ್ನು ಅವಲೋಕಿಸಿ ನಾವು ಮೇಲೆ ಮಾಡಿದ ಚರ್ಚೆಯ ದೃಷ್ಟಿಯಲ್ಲಿ, ನಮ್ಮ ಅಭಿಪ್ರಾಯ ಹೀಗಿದೆ ಮೊಕದ್ದಮೆಯ ಪ್ರತಿಯೊಂದು ವಸ್ತುವಿಷಯ ಎಂದರೆ ಮೌಖಿಕ ಮತ್ತು ದಸ್ತಾವೇಜಿಯ ಸಾಕ್ಷ್ಯಗಳಲ್ಲಿನ್ನು, ಪ್ರತಿಯೊಂದನ್ನು ಮತ್ತು ಪ್ರತಿಯೊಂದು ದೃಷ್ಟಿಕೋನದಿಂದ ಅಧಿವಿಚಾರಣಾ ನ್ಯಾಯಾಲಯವು ಯುಕ್ತವಾಗಿ ಪರಿಗಣನೆಗೆ ತೆಗೆದುಕೊಂಡು ಅಪೀಲುದಾರ/ಆಪಾದಿತ ತಪ್ಪಿತಸ್ಥನೆಂದು ನಿರ್ಣಿತನೆಂದು ನಿರ್ಣಯಿಸಿರುವುದು ಸರಿಯಾದುದಾಗಿದೆ. ಆದುದರಿಂದ ವಿಚಾರಣಾಧೀನ ನ್ಯಾಯಾಲಯದ ತೀರ್ಪಿನಲ್ಲಿ ಯಾವುದೇ ಅಕ್ರಮತೆಯು ಕಂಡುಬರುವುದಿಲ್ಲ, ವಿಚಾರಣಾಧೀನ ನ್ಯಾಯಾಲಯದ ಸದರಿ ನ್ಯಾಯನಿರ್ಣಯದಲ್ಲಿ ಯಾವುದೇ ಪ್ರತಿಕೂಲ ಅಂಶವಾಗಲೀ ಅಥವಾ ಕೃತಿಮ ಅಂಶವಾಗಲೀ ಕಂಡುಬರುವುದಿಲ್ಲ. ಮೊಕದ್ದಮೆಯ ತೀರ್ಪಿನಲ್ಲಿ ಮತ್ತು ನ್ಯಾಯನಿರ್ಣಯದ ಆದೇಶವನ್ನು ವಜಾ ಮಾಡಲು ಅಥವಾ ಆದೇಶವನ್ನು ಮಾರ್ಪಾಡು ಮಾಡುವ ಸಂಬಂಧದಲ್ಲಿ ಹಸ್ತಕ್ಷೇಪಮಾಡಲು ಯಾವುದೇ ಕಾನೂನಾತ್ಮಕ ಮತ್ತು ಸಿಂಧುವಾದ ಕಾರಣಗಳು ಇರುವುದಿಲ್ಲ. ಆದುದರಿಂದ ಅಪೀಲಿನಲ್ಲಿ ಯಾವುದೇ ಗುಣಾರ್ಹತೆಗಳು ಇರುವುದಿಲ್ಲ ಅದಕ್ಕನುಸಾರವಾಗಿ ಈ ಮೂಲಕ ಅಪೀಲನ್ನು ವಜಾ ಮಾಡಲಾಗಿದೆ. ಈ ಸಂಬಂಧದಲ್ಲಿ ವಿಚಾರಣಾ ನ್ಯಾಯಾಲಯವು ವಿಧಿಸಿದ ದಂಡನೀಯ ಶಿಕ್ಷೆಯೂ ಸೂಕ್ತವಾದುದಾಗಿದೆ ಮತ್ತು ಯುಕ್ತವಾದುದಾಗಿದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.